# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಸೆಪ್ಟೆಂಬರ್ 24, 2021

ಸಂಪುಟ : 48 ಸಂಚಿಕೆ : 132 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




# ಪೌರ ಕಾರ್ಮಿಕರ ಕೆಲಸದಿಂದ ಸ್ಮಾರ್ಟ್ ಸಿಟಿ

## ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಶ್ಲಾಘನೆ

ದಾವಣಗೆರೆ,ಸೆ.23 - ಫ್ಲೈಓವರ್, ಕಾಂಕ್ರೀಟ್ ರಸ್ತೆ, ಫುಟ್‌ಪಾತ್, ಉದ್ಯಾನವನ ದಂತಹ ಆಕರ್ಷಕ ಯೋಜನೆಗಳಿಂದ ಇಂದು ದಾವಣಗೆರೆ ಸ್ಮಾರ್ಟ್ ಸಿಟಿ ಆಗಿಲ್ಲ, ಬದಲಾಗಿ ಪೌರ ಕಾರ್ಮಿಕರು ಸ್ಮಾರ್ಟ್ ಕೆಲಸದಿಂದ ಸ್ಮಾರ್ಟ್ ಸಿಟಿ ಆಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ನಗರದ ನಿಜಲಿಂಗಪ್ಪ ಬಡಾವಣೆ ಕರ್ನಾಟಕ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪೌರ ಕಾರ್ಮಿಕರ ದಿನಾಚರಣೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ವಾಸ ಯೋಗ್ಯ ನಗರಗಳ ಪಟ್ಟಿಯಲ್ಲಿ ದಾವಣಗೆರೆ ದೇಶಕ್ಕೆ 9ನೇ ಸ್ಥಾನ ಹಾಗೂ ಕರ್ನಾಟಕ ರಾಜ್ಯಕ್ಕೆ 2ನೇ ಸ್ಥಾನ ಪಡೆದುಕೊಂಡಿದ್ದು, ಇದರಲ್ಲಿ ಪೌರ ಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಕೋವಿಡ್ ನಿಯಂತ್ರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ಎಲ್ಲಾ ಪೌರ ಕಾರ್ಮಿಕರ ಹಿತಕ್ಕಾಗಿ ಜಿಲ್ಲಾಡಳಿತ ಯಾವಾಗಲು ಅವರ ಪರವಾಗಿರುತ್ತದೆ ಎಂದು ಭರವಸೆ ನೀಡಿದರು.

ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್. ಡಿ.ಗೋಣೆಪ್ಪ ಮಾತನಾಡಿ, ನಿವೃತ್ತಿ ಹೊಂದಿದ ಪೌರ ಕಾರ್ಮಿಕರ ಕೆಲಸವನ್ನು ಅವರ ಕುಟುಂಬದ ಸದಸ್ಯರಿಗೆ ನೀಡಬೇಕು ಎಂದು ಮನವಿ ಮಾಡಿದರು. ಪಾಲಿಕೆ ಸದಸ್ಯ ಎ.ನಾಗರಾಜ್ ಮಾತನಾಡಿ, ದೊಡ್ಡ ದೊಡ್ಡ ವಾರ್ಡ್‌ಗಳಲ್ಲಿ ಸ್ವಚ್ಛತೆಯಾಗುತ್ತಿದೆಯೇ ವಿನಃ ಸಣ್ಣ ವಾರ್ಡ್‌ಗಳಲ್ಲಿ ಸಮರ್ಪಕವಾಗಿ ಸ್ವಚ್ಛತೆಯಾಗುತ್ತಿಲ್ಲ. ಹೆಚ್ಚುವರಿಯಾಗಿ 228 ಪೌರ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ ಪೌರ ಕಾರ್ಮಿಕರ ಮಕ್ಕಳ ಸಾಧನೆಯನ್ನು ಪ್ರೋತ್ಸಾಹಿಸಿ ಸನ್ಮಾನಿಸ ಲಾಯಿತು. ವಯೋನಿವೃತ್ತಿ ಹೊಂದುತ್ತಿರುವ ಜಿ.ಬಿ.ಲಕ್ಕಳ್ಳಿ ಹಾಲವಕ್ಕ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲಿಕೆ ಮೇಯರ್ ಎಸ್. ಟಿ.ವೀರೇಶ್, ಉಪ ಮೇಯರ್ ಶಿಲ್ಪ ಜಯಪ್ರಕಾಶ್, ಆಯುಕ್ತ ವಿಶ್ವನಾಥ ಮುದಜ್ಜಿ, ಉಪ ಆಯುಕ್ತ ನಳಿನ, ಸ್ಥಾಯಿ (2ನೇ ಪುಟಕ್ಕೆ)

### ಕೆಲವೇ ದಿನಗಳಲ್ಲಿ ನೇರ ಪಾವತಿ ನೌಕರರ ಖಾಯಂ : ಮೇಯರ್

**ಕೆಲವೇ ದಿನಗಳಲ್ಲಿ ನೇರ ಪಾವತಿ ನೌಕರರನ್ನು ಖಾಯಂ ಮಾಡಲಾಗುವುದು ಎಂದು ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ತಿಳಿಸಿದ್ದು, ಪೌರ ಕಾರ್ಮಿಕರ ದೃಷ್ಟಿಯಿಂದ ತಾತ್ಕಾಲಿಕವಾಗಿ ಆಸ್ಪತ್ರೆ ತೆರೆಯಲಾಗುವುದು. ಪೌರ ಕಾರ್ಮಿಕರ ಸುರಕ್ಷತೆಗೆ ಅಗತ್ಯ ಪರಿಕರಗಳನ್ನು ನೀಡಲಾಗುವುದು ಎಂದಿದ್ದಾರೆ.**

**ಅ. 2 ರಿಂದ ನಿತ್ಯ 25 ರಿಂದ 30 ಪೌರ ಕಾರ್ಮಿಕರಿಗೆ** **(2ನೇ ಪುಟಕ್ಕೆ)**

# ಹಿಂದುಳಿದ ವರ್ಗಗಳ ಜಾತಿ ಗಣತಿ ಆಡಳಿತಾತ್ಮಕವಾಗಿ ಕಷ್ಟ

ನವದೆಹಲಿ, ಸೆ. 23 – ಹಿಂದುಳಿದ ವರ್ಗಗಳ ಜಾತಿ ಗಣತಿ ಆಡಳಿತಾತ್ಮಕವಾಗಿ ಕಷ್ಟ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿರುವ ಕೇಂದ್ರ ಸರ್ಕಾರ, ಜಾತಿ ಗಣತಿಯಿಂದ ಹಿಂದುಳಿದ ವರ್ಗಗಳನ್ನು ಹೊರಗಿಟ್ಟಿರುವುದು ಎಚ್ಚರಿಕೆಯಿಂದ ತೆಗೆದುಕೊಂಡಿರುವ ನಿರ್ಧಾರ ಎಂದು ಹೇಳಿದೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ಹತ್ತು ಪಕ್ಷಗಳ ನಿಯೋಗ ಇತ್ತೀಚೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಜಾತಿ ಗಣತಿಗೆ ಒತ್ತಾಯಿಸಿತ್ತು.

ಸುಪ್ರೀಂ ಕೋರ್ಟ್ ಎದುರು ಪ್ರಮಾಣ ಪತ್ರ ಸಲ್ಲಿಸಿರುವ ಕೇಂದ್ರ ಸರ್ಕಾರ, 2011ರಲ್ಲಿ ರೂಪಿಸಲಾದ ಸಾಮಾಜಿಕ – ಆರ್ಥಿಕ ಹಾಗೂ ಜಾತಿ ಗಣತಿ ಲೋಪಗಳಿಂದ ಕೂಡಿದೆ ಎಂದು ಪ್ರಮಾಣ ಪತ್ರದಲ್ಲಿ ಕೇಂದ್ರ ಸರ್ಕಾರ ಹೇಳಿದೆ.

2011ರಲ್ಲಿ ರೂಪಿಸಲಾದ ಇತರೆ ಹಿಂದುಳಿದ ವರ್ಗಗಳ ಜಾತಿ ಗಣತಿಯ ಕಚ್ಚಾ ವಿವರ ಬಹಿರಂಗ ಪಡಿಸುವಂತೆ ಮಹಾರಾಷ್ಟ್ರ (3ನೇ ಪುಟಕ್ಕೆ)

# ವಿಕಲಚೇತನರು, ಹೊರ ಬರಲಾಗದವರಿಗೆ ಮನೆಯಲ್ಲೇ ಕೊರೊನಾ ಲಸಿಕೆ

ನವದೆಹಲಿ, ಸೆ. 23-ವಿಕಲಚೇತನರು ಹಾಗೂ ಮನೆಯಿಂದ ಹೊರ ಬರಲು ಸಾಧ್ಯವಾಗದ ಸ್ಥಿತಿಯಲ್ಲಿರುವವರಿಗೆ ಅವರ ಮನೆಗಳಲ್ಲೇ ಕೊರೊನಾ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಹಣಕಾಸು ಸಚಿವಾಲಯದ ಅಧಿಕಾರಿಗಳು, ಕೊರೊನಾ ಲಸಿಕೆ ಹೆಚ್ಚು ಜನರಿಗೆ ತಲುಪಿಸುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಪ್ರತಿನಿತ್ಯ ಕಂಡು ಬರುತ್ತಿರುವ ಕೊರೊನಾ ಪ್ರಕರಣಗಳು ಇಳಿಮುಖವಾದರೂ (2ನೇ ಪುಟಕ್ಕೆ)

### ಮೂರನೇ ಅಲೆ : ಮಕ್ಕಳಿಗೆ ಶೇ.20 ಬೆಡ್ ಮೀಸಲು

ಬೆಂಗಳೂರು, ಸೆ. 23 – ಕೊರೊನಾದ ಮೂರನೇ ಅಲೆ ವಿರುದ್ಧ ಹೋರಾಡಲು ಸಿದ್ಧತೆ ನಡೆಸಿಕೊಳ್ಳುವ ಭಾಗವಾಗಿ, ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಶೇ.20ರಷ್ಟು ಬೆಡ್‌ಗಳನ್ನು ಮಕ್ಕಳಿಗೆ ಮೀಸಲಿಡಲಾಗುವುದು ಎಂದು ರಾಜ್ಯ ಆರೋಗ್ಯ ಸಚಿವ ಕೆ. ಸುಧಾಕರ್ ತಿಳಿಸಿದ್ದಾರೆ.

ವಿಜಯನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಂ. ಕೃಷ್ಣಪ್ಪ ಅವರು ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದ ಸಚಿವರು, ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸಿನ ಅನ್ವಯ ಸರ್ಕಾರ 25,870 ಆಕ್ಸಿಜನ್ ಬೆಡ್‌ಗಳು ಹಾಗೂ 502 ಮಕ್ಕಳ ವೆಂಟಿಲೇಟರ್‌ಗಳನ್ನು ಸಿದ್ಧವಾಗಿಟ್ಟುಕೊಂಡಿದೆ. ಸರ್ಕಾರ ಹಾಗೂ ಖಾಸಗಿ ವಲಯಗಳೆರಡರಲ್ಲೂ ಸೌಲಭ್ಯ ಕಲ್ಪಿಸಲಾಗಿದೆ ಎಂದಿದ್ದಾರೆ.

# ಮೀಸಲಾತಿ: ಆಡಳಿತಾರೂಢ ಸದಸ್ಯರಿಂದಲೇ ಧರಣಿ

**ವೀರಶೈವ-ಲಿಂಗಾಯತ, ಪಂಚಮಸಾಲಿ, ಕುರುಬ, ವಾಲ್ಮೀಕಿ, ಉಪ್ಪಾರ ಸೇರಿ ವಿವಿಧ ಸಮುದಾಯಗಳ ಮೀಸಲಾತಿಗೆ ವಿಧಾನಸಭೆಯಲ್ಲಿ ಧರಣಿ**

ಬೆಂಗಳೂರು, ಸೆ.23 - ವೀರಶೈವ-ಲಿಂಗಾಯತ, ವಾಲ್ಮೀಕಿ ಮತ್ತು ಕುರುಬ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ, ಆಡಳಿತ ಪಕ್ಷದ ಸದಸ್ಯರೇ ಧರಣಿ ನಡೆಸಿದ ಪ್ರಸಂಗ ಜರುಗಿತು.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ವಿಷಯ ಪ್ರಸ್ತಾಪಿಸಿ ವಾಲ್ಮೀಕಿ, ವೀರಶೈವ-ಲಿಂಗಾಯತ, ಪಂಚಮಶಾಲಿ, ಕುರುಬ, ಉಪ್ಪಾರರು ಸೇರಿದಂತೆ, ವಿವಿಧ ಸಮುದಾಯಗಳ ಮೀಸಲಾತಿಗೆ ಸಂಬಂಧಿಸಿದಂತೆ (3ನೇ ಪುಟಕ್ಕೆ)

# ಮಕ್ಕಳಲ್ಲಿ ಬಂದಿರುವ ಜ್ವರಕ್ಕೂ ಕೊರೊನಾಗೂ ಸಂಬಂಧವಿಲ್ಲ

ಬೆಂಗಳೂರು, ಸೆ. 23 - ಮಕ್ಕಳಲ್ಲಿ ಕಂಡುಬರುತ್ತಿರುವ ತೀವ್ರತರನಾದ ಜ್ವರಕ್ಕೂ ಕೊರೊನಾಕ್ಕೂ ಸಂಬಂಧವಿಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಎಂ.ಕೃಷ್ಣಪ್ಪ ಅವರ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಹವಾಮಾನಕ್ಕೆ ಅನುಗುಣವಾಗಿ ಕಾಲಾನುಕಾಲಕ್ಕೆ ಬರುವ ವೈರಲ್ ಜ್ವರ ಇದಾಗಿದೆ, ಉಳಿದ ವರ್ಷಗಳಿಗಿಂತ ಈ ಬಾರಿ ಇದರ ಪ್ರಭಾವ ಹೆಚ್ಚಾಗಿದೆ ಎಂದರು. (3ನೇ ಪುಟಕ್ಕೆ)


### ಸದಾ ನಿಮ್ಮ ನೆನಪಿನಂಗಳದಲ್ಲಿ



**ದಿ|| ದಂಡಪ್ಪರ್ ಮಲ್ಲಿಕಾರ್ಜುನಪ್ಪ**
(ನಗರಸಭಾ ಮಾಜಿ ಸದಸ್ಯರು)

ನೀವು ನಮ್ಮನ್ನಗಲಿ ಇಂದಿಗೆ (24.09.2021ಕ್ಕೆ) 32 ವರ್ಷಗಳಾದವು. ನಿಮ್ಮ ಸ್ನೇಹಮಯ ಜೀವನದ ಬದುಕು, ನಮ್ಮಲ್ಲಿ ನೀವಿಟ್ಟಿದ್ದ ಬಾಂಧವ್ಯ ಅನನ್ಯ. ನಿಮ್ಮ ಪ್ರೀತಿ, ಆದರ್ಶ, ಮಾರ್ಗದರ್ಶನ ಸದಾ ನಮ್ಮ ನೆನಪಿನಂಗಳದಲ್ಲಿವೆ. ನಿಮ್ಮ ಭೌತಿಕ ದೇಹ ನಮ್ಮಿಂದ ದೂರವಾಗಿರಬಹುದು. ಆದರೆ ನಿಮ್ಮ ಅಂತರಾಳ ಅವಿಸ್ಮರಣೀಯ, ಸದಾ ನಮ್ಮಲ್ಲಿ ಹಸಿರಾಗಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತಾ, ನೀವು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ,


ಪತ್ನಿ : ದಂಡಪ್ಪರ ವಿಜಯಲಕ್ಷ್ಮಿ
ಮಕ್ಕಳು : ದಂಡಪ್ಪರ ಶಿವಕುಮಾರ್ (ಶಿವು), ದಂಡಪ್ಪರ್ ಅನಿಲ್‌ಕುಮಾರ್
ಸೊಸೆ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ದಂಡಪ್ಪರ ವಂಶಸ್ಥರು ಮತ್ತು ಬಂಧು-ಮಿತ್ರರು.



## ದಸರಾ–ದೀಪಾವಳಿ ಹಬ್ಬದ ಪ್ರಯುಕ್ತ

AP ENCLAVE
ANNAPURNESHWARI

# AP ENCLAVE
Exclusive Residential Plotted Development








*FOR THOSE WHO EXPECT MORE*

**PROJECT HIGHLIGHTS**
- 24x7 bus facility
- 24x7 Water & Power supply
- Automatic LED Street Lights
- Clear Files • Execellent Location
- Entire Layout As per Vaastu
- Execellent Water Table

**AMENITIES**
- Entrance Arch with Gate
- Asphalted Roads
- Kids Play Area
- Underground drainage system
- Round the clock security

- Harihar City : 05 Minutes
- Davangere City : 10 Minutes

Execellent connectivity and proximity to premier educational institutions.

Healthcare facilities and a wide range of work places.

## ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ

ನಾವು ನೂತನವಾಗಿ ನಿರ್ಮಿಸಿರುವ
**ಅನ್ನಪೂರ್ಣೇಶ್ವರಿ ಎನ್‌ಕ್ಲೇವ್ (A.P. Enclave)ನಲ್ಲಿ**
'ಎ' ಬಡಾವಣೆ ಮತ್ತು 'ಬಿ' ಬಡಾವಣೆಗಳ ನಿರ್ಮಾಣ ಮುಕ್ತಾಯಗೊಂಡಿದ್ದು,
ಇನ್ನು 'ಸಿ' ಮತ್ತು 'ಡಿ' ಬಡಾವಣೆಗಳ ನಿರ್ಮಾಣ ಪ್ರಕ್ರಿಯೆ ಆರಂಭಗೊಂಡಿದೆ.
ಈ ಬಡಾವಣೆಗಳಲ್ಲಿನ ನಿವೇಶನಗಳಿಗೆ
**ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಂದ**
**250** ಅರ್ಜಿಗಳನ್ನು ಆಹ್ವಾನಿಸಲಾಗಿದ್ದು,
ಈ ಅರ್ಜಿಗಳಲ್ಲಿ **150** ಅರ್ಜಿಗಳನ್ನು ಮಾತ್ರ ಲಕ್ಕಿ ಡ್ರಾ ಮೂಲಕ ಆಯ್ಕೆ ಮಾಡಲಾಗುವುದು.

**ನಿವೇಶನಗಳ ಅಳತೆ : 30×50 ಅಡಿಗಳು**

ನಿವೇಶನಕ್ಕೆ 250 ಅರ್ಜಿಗಳನ್ನು ಕೊಡಲಾಗುತ್ತದೆ.
ಅರ್ಜಿ ಒಂದಕ್ಕೆ ರೂ. 1050/- (ಹಿಂತಿರುಗಿಸುವ ಶುಲ್ಕ)

ಅರ್ಜಿ ವಿತರಿಸುವ ದಿನಾಂಕ : 24.09.2021ರ ಶುಕ್ರವಾರ
ಅರ್ಜಿ ಸಿಗುವ ಸ್ಥಳ : ಎ.ಪಿ. ಎನ್‌ಕ್ಲೇವ್
ಹರಿಹರ-ದಾವಣಗೆರೆ ಸಮಾನಂತರ ರಸ್ತೆ, ರೈಲ್ವೆ ಗೇಟ್ ಹತ್ತಿರ, ಹರಿಹರ.

(ಷರತ್ತುಗಳು ಅನ್ವಯಿಸುತ್ತವೆ)

ಹೆಚ್ಚಿನ ಮಾಹಿತಿಗಾಗಿ
**ಎ.ಪಿ. ಡೆವಲಪರ್ಸ್**
ಮೊ. 81235 31456, 97392 23456

# ಪೌರ ಕಾರ್ಮಿಕರನ್ನು ಗೌರವದಿಂದ ಕಾಣಬೇಕು

ಮಲೇಬೆನ್ನೂರು, ಸೆ.23- ಪಟ್ಟಣದ ಪುರಸಭೆ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಪುರಸಭೆ ಮುಖ್ಯಾಧಿಕಾರಿ ಡೊಂಬರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಡೊಂಬರ್ ಅವರು, ಪೌರ ಕಾರ್ಮಿಕರು ನಗರ, ಪಟ್ಟಣಗಳನ್ನು ಸ್ವಚ್ಛಗೊಳಿಸುವ ಮೂಲಕ ಉತ್ತಮ ವಾತಾವರಣ ನಿರ್ಮಾಣ ಮಾಡಿ, ಎಲ್ಲರ ಆರೋಗ್ಯ ಕಾಪಾಡುತ್ತಿದ್ದಾರೆ.

ಪೌರ ಕಾರ್ಮಿಕರನ್ನು ಜನರು ಗೌರವದಿಂದ ಕಾಣಬೇಕೆಂದು ಮನವಿ ಮಾಡಿದ ಅವರು, ಪೌರ ಕಾರ್ಮಿಕರು ಕೂಡ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕೆಂದರು.

ಹೆಮ್ಮಾರಿ ಕೊರೊನಾ ವೇಳೆ ಪೌರ ಕಾರ್ಮಿಕರು ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ.



ಸರ್ಕಾರವೂ ಅವರ ಸೇವೆಯನ್ನು ಗುರ್ತಿಸಿ, ಈ ವರ್ಷ 7 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುತ್ತಿದೆ. ನಾವು ಕೂಡಾ ಪುರಸಭೆಯಿಂದ ಪೌರ ಕಾರ್ಮಿಕರಿಗೆ ಅಗತ್ಯ ಸೌಲಭ್ಯ ನೀಡಿದ್ದೇವೆ. ಪ್ರತಿ ತಿಂಗಳು ಡಾ. ಅಪೂರ್ವ ಅವರಿಂದ ಆರೋಗ್ಯ ತಪಾಸಣೆ ಮಾಡಿಸುತ್ತಿದ್ದೇವೆ ಎಂದು ಡೊಂಬರ್ ತಿಳಿಸಿದರು.

ಸಮಾರಂಭದಲ್ಲಿ ಎಲ್ಲಾ ಪೌರ ಕಾರ್ಮಿಕರನ್ನು ಸನ್ಮಾನಿಸಿ, ಊಟದ ಕ್ಯಾರಿ ಬಾಕ್ಸ್ ಮತ್ತು ಪ್ರಥಮ ಚಿಕಿತ್ಸಾ ಕಿಟ್‌ಗಳನ್ನು ವಿತರಿಸಲಾಯಿತು.

ಈ ವೇಳೆ ಪುರಸಭೆ ಮಾಜಿ ಸದಸ್ಯ ಎ. ಆರೀಫ್ ಅಲಿ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಗೌಡ್ರ ಮಂಜಣ್ಣ,

**ಮಲೇಬೆನ್ನೂರು ಪುರಸಭೆ ಮುಖ್ಯಾಧಿಕಾರಿ ಡೊಂಬರ್**

ಎ.ಕೆ. ಲೋಕೇಶ್ ಅವರು ಪೌರ ಕಾರ್ಮಿಕರಿಗೆ ಗುಲಾಬಿ ಹೂ ನೀಡಿ ಶುಭಾಶಯ ಕೋರಿದರು. ಪೌರ ನೌಕರರ ಸಂಘದ ಗೌರವಾಧ್ಯಕ್ಷ ಖಿಜರ್ ಅಲಿಖಾನ್ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಅಧಿಕಾರಿಗಳಾದ ದಿನಕರ್, ನವೀನ್, ಗಣೇಶ್ ರಾವ್, ಉಮೇಶ್, ಪ್ರಭು, ಶಿವಯೋಗಿ ಕುಳೇನೂರು, ಚಿತ್ರಪ್ಪ, ಇಮ್ರಾನ್, ಪರಶುರಾಮ್ ಇನ್ನಿತರರು ಹಾಜರಿದ್ದರು.

# ಮನೆಯಲ್ಲೇ ಕೊರೊನಾ ಲಸಿಕೆ

(1ನೇ ಪುಟದಿಂದ) ದೇಶ ಈಗಲೂ ಕೊರೊನಾದ ಎರಡನೇ ಅಲೆಯ ನಡುವೆ ಇದೆ. ಆದರೂ, ಕಳೆದ ವಾರ ಕಂಡುಬಂದ ಕೊರೊನಾ ಪ್ರಕರಣಗಳಲ್ಲಿ ಶೇ.62.73ರಷ್ಟು ಕೇರಳದ ವಾಗಿವೆ. ಕೇರಳ ರಾಜ್ಯದಲ್ಲಿ ಮಾತ್ರ ಸಕ್ರಿಯ ಸೋಂಕಿತರ ಸಂಖ್ಯೆ ಲಕ್ಷಕ್ಕಿಂತ ಹೆಚ್ಚಾಗಿದೆ ಎಂದವರು ಹೇಳಿದ್ದಾರೆ.

ದೇಶದ 33 ಜಿಲ್ಲೆಗಳಲ್ಲಿ ವಾರದ ಪಾಸಿಟಿವ್ ದರ ಶೇ.10ಕ್ಕಿಂತ ಹೆಚ್ಚಾಗಿದೆ ಹಾಗೂ 23 ಜಿಲ್ಲೆಗಳಲ್ಲಿ ಶೇ.5-10ರಷ್ಟಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಾಸಿಟಿವ್ ದರ ಶೇ.5ಕ್ಕಿಂತ ಹೆಚ್ಚಾಗಿರುವ ಪ್ರದೇಶಗಳಲ್ಲಿ ಜನರು ಮುಂಬರುವ ಹಬ್ಬದ ದಿನಗಳಲ್ಲಿ ಜನರು ಗುಂಪು ಗೂಡುವುದನ್ನು ತಪ್ಪಿಸಬೇಕು ಎಂದವರು ಹೇಳಿದ್ದಾರೆ.

## ಕೊರೊನಾ ನಂತರದ ಸಮಸ್ಯೆಗಳ ಚಿಕಿತ್ಸೆಗೆ ಮಾರ್ಗಸೂಚಿ

ನವದೆಹಲಿ, ಸೆ. 23 – ಕೊರೊನಾ ನಂತರ ಕಂಡು ಬರುವ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದ್ದಾರೆ. ಇದು ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಆರೋಗ್ಯ ಕಾರ್ಯಕರ್ತರಿಗೆ ನೆರವಾಗಲಿದೆ.

ಈ ಬಗ್ಗೆ ಮಾತನಾಡಿರುವ ಸಚಿವರು, ವೈದ್ಯರು ಹಾಗೂ ಆರೋಗ್ಯ ಸೇವಾ ಕಾರ್ಯಕರ್ತರು ಕೊರೊನಾದ ದೀರ್ಘಾವಧಿ ಪರಿಣಾಮ ಗಳಿಗೆ ಚಿಕಿತ್ಸೆ ನೀಡಲು ನೆರವಾಗಲಿದೆ ಎಂದಿದ್ದಾರೆ.

ಕೊರೊನಾದಿಂದ ಆಗುವ ಪರಿಣಾಮಗಳನ್ನು ತಗ್ಗಿಸಲು ಸಕ್ರಿಯವಾಗಿ ಹಾಗೂ ಸಮಗ್ರವಾಗಿ ಚಿಕಿತ್ಸೆ ನೀಡುವ ಅಗತ್ಯವಿದೆ. ಕೊರೊನಾ ಚಿಕಿತ್ಸೆ ವೇಳೆ ಹೆಚ್ಚಿನ ಪ್ರಮಾಣದ ಸ್ಟಿರಾಯ್ಡ್ ಸೇವಿಸುವುದರಿಂದ ಬ್ಲಾಕ್ ಫಂಗಸ್ ರೋಗ ಬಂದಿರುವುದನ್ನು ಗಮನಿಸಿದ್ದೇವೆ. ಹೀಗಾಗಿ ಅತಿ ಕಡಿಮೆ ಅಡ್ಡ ಪರಿಣಾಮದ ಔಷಧಗಳನ್ನು ಬಳಸುವ ಅಗತ್ಯವಿದೆ ಎಂದು ಸಚಿವರು ಹೇಳಿದ್ದಾರೆ.

ಕೊರೊನಾದ ನಂತರ ಕಂಡು ಬರುವ ಭೀತಿ, ಮಾನಸಿಕ ಆರೋಗ್ಯ ಸಮಸ್ಯೆಯಂತಹ ವಿಷಯಗಳನ್ನು ಎದುರಿಸುವುದು ಮುಖ್ಯವಾಗಿದೆ. ಕೊರೊನಾ ನಂತರದ ವಿಷಯಗಳನ್ನು ಅರ್ಥ ಮಾಡಿಕೊಂಡು ಬಗೆಹರಿಸಬೇಕಿದೆ ಎಂದು ಮಾಂಡವೀಯ ಹೇಳಿದ್ದಾರೆ.

# ಬಸವೇಶ್ವರ ಮೂರ್ತಿ ಪ್ರತಿಷ್ಠಾಪಿಸಲು ಒತ್ತಾಯ

ರಾಣೇಬೆನ್ನೂರು, ಸೆ.21- ಜಗಜ್ಯೋತಿ ಬಸವಣ್ಣನವರ ಮೂರ್ತಿಯನ್ನು ನಗರದ ಸಂಗಂ ವೃತ್ತದಲ್ಲಿ ಪ್ರತಿಷ್ಠಾಪಿಸಬೇಕು ಎಂದು ಒತ್ತಾಯಿಸಿ, ಬಸವ ಜ್ಯೋತಿ ಮಹಿಳಾ ಮಂಡಳಿ, ದಾನೇಶ್ವರಿ ಮಹಿಳಾ ಮಂಡಳಿ, ಕದಳಿ ವೇದಿಕೆ, ಅಖಿಲ ಭಾರತ ವೀರಶೈವ ಮಹಿಳಾ ಘಟಕ ಹಾಗೂ ವಿವಿಧ ಮಹಿಳಾ ಸಮಾಜಗಳ ವತಿಯಿಂದ ನಗರಸಭೆ ಉಪಾಧ್ಯಕ್ಷರಾದ ಕಸ್ತೂರಿ ಚಿಕ್ಕಬಿದರಿ ಹಾಗೂ ಪೌರಾಯುಕ್ತ ಉದಯಕುಮಾರ ಅವರಿಗೆ ಮನವಿ ಸಲ್ಲಿಸಿದರು.

ವಿವಿಧ ಮಹಿಳಾ ಸಂಘಗಳ ಮುಖ್ಯಸ್ಥೆ ಭಾರತಿ ಜಂಬಗಿ ಮಾತನಾಡಿ, 12ನೇಯ ಶತಮಾನದಲ್ಲಿ ವಿಶ್ವಗುರು ಜಗಜ್ಯೋತಿ ಬಸವಣ್ಣನವರು ವಚನಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕು ತಿದ್ದುವುದರ ಜೊತೆಗೆ ವೈಚಾರಿಕ ಕ್ರಾಂತಿ ನಡೆಸಿದವರು. ಅಂತಹ ಮಹಾತ್ಮರ ಮೂರ್ತಿಯನ್ನು ಸಂಗಂ ವೃತ್ತದಲ್ಲಿ ಪ್ರತಿಷ್ಠಾಪಿಸಬೇಕು ಎಂದು ಒತ್ತಾಯಿಸಿದರು.



**ರಾಣೇಬೆನ್ನೂರಿನಲ್ಲಿ ವಿವಿಧ ಸಂಘಟನೆಗಳ ಒತ್ತಾಯ**

ಬಸವಣ್ಣನವರು ಕಾಯಕದಲ್ಲಿ ದೇವರನ್ನು ಕಂಡವರು, ಅನುಭವ ಮಂಟಪದ ಮೂಲಕ ಸರ್ವರಿಗೂ ಸಮಾನತೆ ನೀಡಿದವರು, ವಚನಗಳ ಆಧಾರದ ಮೇಲೆ ನಮ್ಮ ಸಂವಿಧಾನ ರಚಿತವಾಗಿದೆ. ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ, ಅಂತವರ ನಡೆ, ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಲು ನಗರದ ಜನತೆಗೆ ಮೂರ್ತಿಯ ದರ್ಶನದ ಅವಶ್ಯಕತೆ ಇದೆ ಎಂದು ಒತ್ತಾಯಿಸಿದರು.

ಪುಷ್ಪಾ ಬಾದಾಮಿ, ಸುವರ್ಣಮ್ಮ ಪಾಟೀಲ, ಸುನಂದಮ್ಮ ತಿಳವಳ್ಳಿ, ಗಾಯತ್ರಮ್ಮ ಕುರುವತ್ತಿ, ಶಕುಂತಲಮ್ಮ ಜಂಬಗಿ, ಅನ್ನಪೂರ್ಣಮ್ಮ ದಾನಪ್ಪನವರ, ಭಾಗ್ಯಶ್ರೀ ಗುಂಡಗಟ್ಟಿ, ಎನ್.ಎಸ್. ಶಾಂತಾದೇವಿ, ಪ್ರಮೀಳಾ ಜಂಬಗಿ, ವಿಜಯಾ ಕೊತ್ತಂಬರಿ, ವಚನಶ್ರೀ ಪಾಟೀಲ, ಬಾಬಣ್ಣ ಐರಣಿ ಶೆಟ್ಟರ್, ವೀಣಾ ಹೊದ್ದಗೇರಿ, ಸಿ.ಬಿ. ಉಮಾ, ಪಾರ್ವತಮ್ಮ ಬೆನಕನಕೊಂಡ, ಶಾಂತಾ ಪಾಟೀಲ, ಮುತ್ತಣ್ಣ ಹೊದ್ದಿಗೇರಿ, ಬಸವರಾಜ ಬಾದಾಮಿ, ಶಿವಪ್ಪ ಗುರಿಕಾರ, ವಿ.ಎಸ್. ಸಂಗನಗೌಡ ಸೇರಿದಂತೆ ವಿವಿಧ ಮಹಿಳಾ ಸಂಘಗಳ ಪದಾಧಿಕಾರಿಗಳು ಹಾಜರಿದ್ದರು.

# ಕಾರ್ಮಿಕರ ಕೆಲಸದಿಂದ ಸ್ಮಾರ್ಟ್ ಸಿಟಿ

(1ನೇ ಪುಟದಿಂದ) ಸಮಿತಿ ಅಧ್ಯಕ್ಷರಾದ ರೇಣುಕಾ ಶ್ರೀನಿವಾಸ್, ಉಮಾ ಪ್ರಕಾಶ್, ಗೀತಾ ದಿಳ್ಯಪ್ಪ, ಪಾಲಿಕೆ ಸದಸ್ಯರಾದ ರೇಖಾ ಗಂಡಗಾಳೆ, ಜಯಮ್ಮ ಹಾಗೂ ಪೌರ ಕಾರ್ಮಿಕ ಸಂಘದ ರಾಜ್ಯ ಉಪಾಧ್ಯಕ್ಷ ಎಲ್.ಎಂ.ಹನುಮಂತಪ್ಪ, ಪೌರ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ನೀಲಗಿರಿಯಪ್ಪ, ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಗೋವಿಂದ ರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನೇರ ಪಾವತಿ ನೌಕರರ ಖಾಯಂ : ಮೇಯರ್

**(1ನೇ ಪುಟದಿಂದ) ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಲಾಗುವುದು. ಎಲ್ಲಾ ಪೌರ ಕಾರ್ಮಿ ಕರಿಗೂ ವಿಮೆ ನೀಡಲಾಗು ವುದು ಎಂದು ಭರವಸೆ ನೀಡಿದ್ದಾರೆ. ನಿಂತಿರುವ ಗೃಹಭಾಗ್ಯ ಯೋಜನೆಯ ಕಾಮಗಾರಿ ಯನ್ನು, ಡಿಸೆಂಬರ್ ಒಳಗಾಗಿ ಕಾಮಗಾರಿ ಮುಗಿಸಬೇಕು ಎಂದು ಇಂಜಿನಿಯರ್‌ಗಳಿಗೆ ತಾಕೀತು ಮಾಡಲಾಗಿದೆ ಎಂದು ತಿಳಿಸಿದರು.**

## ಕಾರ್ಮಿಕರ ನಡುವೆ ತಾರತಮ್ಯ: ಪ್ರತಿಭಟನೆ

ಖಾಯಂ ಪೌರ ಕಾರ್ಮಿಕರು ಹಾಗೂ ನೇರ ಪಾವತಿ ಪೌರ ಕಾರ್ಮಿಕರ ನಡುವೆ ಸರ್ಕಾರ ತಾರತಮ್ಯ ಮಾಡುತ್ತಿದೆ ಎಂದು ನೇರ ಪಾವತಿ ಪೌರ ಕಾರ್ಮಿಕರು ಪ್ರತಿಭಟಿಸಿದ್ದಾರೆ.

ಪೌರ ಕಾರ್ಮಿಕ ದಿನಾಚರಣೆ ನಡೆಯುವ ಸಂದರ್ಭದಲ್ಲಿ ಹೊರಗಡೆ ಪ್ರತಿಭಟಿಸಿದ ಕಾರ್ಮಿಕರು, ಖಾಯಂ ಪೌರ ಕಾರ್ಮಿಕರಿಗೆ ಮಾತ್ರ ಪ್ರೋತ್ಸಾಹ ನೀಡಿ ನಮ್ಮನ್ನು ಕಡೆಗಣಿಸಲಾಗಿದೆ. ನೇರ ಪಾವತಿ ಪೌರ ಕಾರ್ಮಿಕರ ಮಕ್ಕಳಿಗೆ ಅನುಕಂಪದ ಕೆಲಸ ಸಿಗುತ್ತಿಲ್ಲ. ಆರು ಜನ ಮೃತಪಟ್ಟಿದ್ದರೂ, ಮಕ್ಕಳಿಗೆ ಕೆಲಸ ದೊರೆತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕ್ರಮ ಬಿಟ್ಟು ಹೊರ ಬಂದು ಪೌರ ಕಾರ್ಮಿಕರ ಜೊತೆ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಇಂದೇ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಪೌರಕಾರ್ಮಿಕರ ಬೇಡಿಕೆಗಳನ್ನು ಕಾನೂನಾತ್ಮಕವಾಗಿ ಪರಿಶೀಲಿಸಿ ಅವುಗಳನ್ನು ಈಡೇರಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಗೃಹಭಾಗ್ಯ ಯೋಜನೆಯಡಿ ಅನೇಕ ಫಲಾನುಭವಿಗಳ ಹೆಸರುಗಳು ಬಿಟ್ಟುಹೋಗಿದ್ದು, ನಿಯಮಾನುಸಾರ ಸಲ್ಲಿಸಿದ ಅರ್ಜಿಗಳನ್ನು ಸರ್ಕಾರಕ್ಕೆ ತಲುಪಿಸುತ್ತೇವೆ ಎಂದವರು ಹೇಳಿದರು.

# ಲಾಭದಲ್ಲಿ ವಿಶ್ವಬಂಧು ಕ್ರೆಡಿಟ್ ಸೊಸೈಟಿ



ಹರಿಹರ, ಸೆ.23- ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಬಡವರ ಬೆವರಿನ ಹಣವನ್ನು ಯಾವುದೇ ಅನ್ಯ ಖರ್ಚುಗಳಿಗೆ ಬಳಕೆ ಮಾಡುವುದಕ್ಕೆ ಆಸ್ಪದ ನೀಡದೇ ಸಾರ್ವಜನಿಕರಿಂದ ಉತ್ತಮ ಸೊಸೈಟಿ ಎಂಬ ಹೆಗ್ಗಳಿಕೆ ಪಡೆಯುವುದರೊಂದಿಗೆ 50.09,571 ರೂ. ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15 ರಂತೆ ಷೇರು ಡಿವಿಡೆಂಡ್ ವಿತರಣೆ ಮಾಡಲಾಗುತ್ತಿದೆ ಎಂದು ಸೊಸೈಟಿ ಅಧ್ಯಕ್ಷ ಬಿ. ರಾಮಚಂದ್ರಪ್ಪ ಬೆಳ್ಳೂಡಿ ತಿಳಿಸಿದ್ದಾರೆ.

ಇಲ್ಲಿನ ವಿದ್ಯಾ ನಗರದಲ್ಲಿರುವ ಐರಣಿ ಹೊಳೆ ಮಠದ ಶಾಖಾ ಮಠದ ಸಭಾಂಗಣದಲ್ಲಿ ಇಂದು ನಡೆದ ಸೊಸೈಟಿಯ 23 ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶ್ರೀ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಮತ್ತು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ 23 ವರ್ಷಗಳಿಂದ ಪ್ರಗತಿ ಸಾಧಿಸುತ್ತಾ ಬಂದಿದೆ. 1242 ಸದಸ್ಯರನ್ನು ಹೊಂದಿ, ಇದುವರೆಗೆ 86,88,808 ರೂಪಾಯಿ ಷೇರು ಬಂಡವಾಳ ಮತ್ತು 14,10,13,906 ರೂ. ಠೇವಣಿಯಿದ್ದು, 11,62,22,713 ರೂ. ಸಾಲವನ್ನು ನೀಡಿದೆ ಎಂದು ಹೇಳಿದರು.

**ಹರಿಹರ : ಸಂಘದ ಅಧ್ಯಕ್ಷ ಬಿ.ರಾಮಚಂದ್ರಪ್ಪ ಬೆಳ್ಳೂಡಿ ಹರ್ಷ**

ಕೊರೊನಾ ಸಂಕಷ್ಟ ಇದ್ದರೂ ಸಹ ಸೊಸೈಟಿ ಬೆಳವಣಿಗೆಗೆ ಮಾತ್ರ ಯಾವುದೇ ರೀತಿಯ ಹಿನ್ನಡೆಯಾಗಿಲ್ಲ. ಶಿವಮೊಗ್ಗ ಭಾಗ ಸೇರಿದಂತೆ ಇತರೆ ನಗರಗಳಲ್ಲಿ ಶಾಖೆಗಳನ್ನು ತೆರೆಯುವ ಗುರಿ ಹೊಂದಲಾಗಿದ್ದು, ಮುಂದೆ ನೂರು ಕೋಟಿ ರೂ. ಠೇವಣಿ ಮೊತ್ತ ಮಾಡುವ ನಿಟ್ಟಿನಲ್ಲಿ ಹೆಜ್ಜೆ ಹಾಕಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಡಿ. ವನಜಾಕ್ಷಮ್ಮ ಕುಂಬಳೂರು, ನಿರ್ದೇಶಕರಾದ ಕೆ. ಕುಮಾರ್ ಹೊಳೆಸಿರಿಗೆರೆ, ಹೆಚ್. ನಾಗರಾಜ್ ಅಮರಾವತಿ , ಹೆಚ್. ಶಾಂತವೀರಪ್ಪ ಯಲವಟ್ಟಿ, ಕೆ. ದೇವೇಂದ್ರಪ್ಪ ಹೊಳೆ ಸಿರಿಗೆರೆ, ಕೆ.ಜಿ. ಮೂರ್ತಿ ಕುಂಬಳೂರು, ಕೆ.ಎಸ್. ದೇವರಾಜ್ ಕುಂಬಳೂರು, ಪಾರ್ವತಮ್ಮ ಶೇಖರಪ್ಪ, ಜಿ. ಮಲ್ಲಪ್ಪ ಬೆಳ್ಳೂಡಿ, ಕಡೆಮನೆ ಪುಟ್ಟಪ್ಪ ಕುಂಬಳೂರು, ಎನ್. ನಾಗರಾಜ್ ಹೊಳೆಸಿರಿಗೆರೆ, ಎನ್.ಕೆ. ಪ್ರಕಾಶ್ ಬೆಳ್ಳೂಡಿ, ವ್ಯವಸ್ಥಾಪಕ ಕೆ.ಟಿ. ಶಂಭುಲಿಂಗಪ್ಪ, ಸಿಬ್ಬಂದಿಗಳಾದ ಲೆಕ್ಕಿಗ ಬಿ. ಗಣೇಶ್, ಕೆ.ಹೆಚ್. ಉಮೇಶ್, ಬಿ.ಎಸ್. ರಾಘವೇಂದ್ರ ಕುಮಾರ್, ಜಿ.ಎಂ. ರವಿಕುಮಾರ್, ನಿರ್ಮಲ ಜಿ.ಎನ್. ಪಿಗ್ಮಿ ಸಂಗ್ರಹಕಾರರಾದ ಹನುಮಂತಪ್ಪ ಬೇಡರ್, ಆರ್. ಬಿ. ಸುರೇಶ್, ಎ.ಬಿ. ಮಂಜುನಾಥ್, ಎಸ್.ಬಿ. ವಿಜಯಕುಮಾರ್, ಹೆಚ್. ಶಿವಮೂರ್ತಿ, ಎಸ್. ಫಣಿರಾಜ್, ಜಿ.ಆರ್. ಭೀಮಪ್ಪ, ಜಿ.ಎಂ. ವಸಂತ್ ಕುಮಾರ್, ಹೆಚ್.ಆರ್. ನಾಗರಾಜ್, ಎ.ಎಸ್. ಟಾಟಾದೇವ್ ಹಾಗು ಇತರರು ಹಾಜರಿದ್ದರು.

## ಹೈಕೋರ್ಟ್‌ಗೆ ಜಡ್ಜ್‌ಗಳ ನೇಮಕ

ನವದೆಹಲಿ, ಸೆ 23 – ಕರ್ನಾಟಕ ಹೈಕೋರ್ಟ್‌ನ ಹತ್ತು ಹೆಚ್ಚುವರಿ ನ್ಯಾಯ ಮೂರ್ತಿ ಗಳನ್ನು ಪೂರ್ಣ ಕಾಲಿಕ ನ್ಯಾಯಮೂರ್ತಿಗಳಾಗಿ ನೇಮಿಸಲಾಗಿದೆ ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ.

ನ್ಯಾಯೂರ್ತಿಗಳಾದ ಇಂದ್ರಕುಮಾರ್ ಅರುಣ್, ಇ. ಸೀತಾರಾಮಯ್ಯ ಇಂದಿರೇಶ್, ಆರ್. ವೆಂಕಪ್ಪ ಹೊಸಮನಿ, ಎಸ್. ವಿಶ್ವಜಿತ್ ಶೆಟ್ಟಿ, ಎಸ್. ಅಮರಣ್ಣನವರ್, ಎಂ. ಗಣೇಶಯ್ಯ ಉಮಾ, ವಿ. ಶ್ರೀಶಾನಂದ, ಹೆಚ್. ಸಂಜೀವಕುಮಾರ್, ಪಿ. ನೇಮಚಂದ್ರ ದೇಸಾಯಿ ಮತ್ತು ಪಿ. ಕೃಷ್ಣ ಭಟ್ ಅವರನ್ನು ಪೂರ್ಣಾವಧಿಗೆ ನೇಮಿಸಲಾಗಿದೆ. ಸೆಪ್ಟೆಂಬರ್ 1ರಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 62 ಆಗಿತ್ತು. ಆದರೆ, ಅಂದು ಕೇವಲ 45 ನ್ಯಾಯ ಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದರು.

# ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರು ಹೊಸ ಚೈತನ್ಯ ನೀಡಬೇಕು



**ಜಗಳೂರು**

ಜಗಳೂರು, ಸೆ.23 - ಸೃಜನಶೀಲ ಚಟುವಟಿಕೆಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ನೀಡುತ್ತಿರುವ ಮಹಿಳಾ ಕಾಂಗ್ರೆಸ್‌ಗೆ ನಾವೆಲ್ಲರು ಸಹಕಾರ ನೀಡಬೇಕು ಎಂದು ಕೆಪಿಸಿಸಿ ಎಸ್ಟಿ ವಿಭಾಗದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಹೇಳಿದರು .


ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಮಹಿಳಾ ಕಾಂಗ್ರೆಸ್ ಪ್ರಿಯದರ್ಶಿನಿ ವಿಭಾಗದ ರಾಜ್ಯಾಧ್ಯಕ್ಷೆ ಹಾಗು ವಕ್ತಾರೆ ಭವ್ಯ ನರಸಿಂಹ ಮೂರ್ತಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಬ್ಲಾಕ್ ಮಹಿಳಾ ಕಾಂಗ್ರೆಸ್ ವತಿಯಿಂದ ಕೇಕ್ ಕತ್ತರಿಸಿ ಕಾರ್ಯಕ್ರಮ ಕುರಿತು ಮಾತನಾಡಿದರು.

ರಾಜ್ಯದಲ್ಲಿ ಯುವ ಜನತೆ ಮೋದಿ ಮೇಲೆ ಭರವಸೆ ಇಟ್ಟು ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ತಂದು ಇದೀಗ ಪರಿತಪಿಸುತ್ತಿದ್ದಾರೆ. ಕಳೆದ ಏಳು ವರ್ಷಗಳ ಕಾಲ ಬೆಲೆ ಏರಿಕೆ, ನಿರುದ್ಯೋಗದಿಂದ ಯುವ ಜನತೆ ರೋಸಿ ಹೋಗಿದ್ದಾರೆ ಎಂದರು. ಇಂತಹ ಯುವ ಜನತೆ ಹಾಗೂ ಮಹಿಳೆಯರ ಪರವಾದ ನೂರಾರು ಕಾರ್ಯಕ್ರಮಗಳನ್ನು ನೀಡಿ ಪಕ್ಷಕ್ಕೆ ಸೆಳೆಯುವಲ್ಲಿ ಭವ್ಯ ನರಸಿಂಹ ಮೂರ್ತಿ ಕಾರ್ಯನಿರ್ವಹಿಸುತ್ತಿದ್ದು ಅಂತವರಿಗೆ ಬೆಂಬಲವಾಗಿ ನಿಂತು ಅವರ ಕೈಬಲ ಪಡಿಸಬೇಕು ಎಂದರು.

ಕೆಪಿಸಿಸಿ ಜಿಲ್ಲಾ ವಕ್ತಾರೆ ನಾಗರತ್ನಮ್ಮ ಮಾತನಾಡಿ, ವಿದೇಶದಲ್ಲಿ ವಿದ್ಯಾಬ್ಯಾಸ ಮಾಡಿದ ಭವ್ಯ ನರಸಿಂಹ ಮೂರ್ತಿ ಹಲವು ಪ್ರಗತಿಪರ ಹೋರಾಟ ಮಾಡುವ ಮೂಲಕ ದೇಶಕ್ಕ ಕಾಂಗ್ರೆಸ್ ಪಕ್ಷ ಸೂಕ್ತ ಎಂದು ಭಾವಿಸಿ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅಂತಹ ಯುವ ಮಹಿಳೆಯರ ಪರವಾಗಿ ನಾವೆಲ್ಲ ನಿಲ್ಲಬೇಕು, ಮಹಿಳಾ ಕಾಂಗ್ರೆಸ್ ಪಕ್ಷಕ್ಕೆ ಹೊಸ ಚೈತನ್ಯ ನೀಡಬೇಕು ಎಂದು ತಿಳಿಸಿದರು .

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆಂಚಮ್ಮ ಧನ್ಯಕುಮಾರ್, ಪ್ರಧಾನ ಕಾರ್ಯದರ್ಶಿ ಸಾವಿತ್ರಮ್ಮ, ಮುಖಂಡರಾದ ಲಕ್ಷ್ಮಿಬಾಯಿ ಸುರೇಶ್ ನಾಯ್ಕ, ಪಲ್ಲಾಗಟ್ಟೆ ಶೇಖರಪ್ಪ, ಬಿ.ಲೋಕೇಶ್, ಬಿ. ಎಚ್.ನಾಗರಾಜ್, ತಾನಾಜಿ ಗೋಸಾಯಿ, ಜಿ.ಈ. ರಮೇಶ್ ಮುಂತಾದವರು ಇದ್ದರು.


**ದ್ವಿತೀಯ ವರ್ಷದ ಪುಣ್ಯಸ್ಮರಣೆ**



**ಶರಣ ಡಾ|| ಹೆಚ್.ಜಿ. ಸುರೇಶ್**
ವೈದ್ಯಾಧಿಕಾರಿ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷಗಳು ಕಳೆದರೂ ನಿಮ್ಮ ನೆನಪು ಚಿರ ಶಾಶ್ವತ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವವರು :

ತಂದೆ : ದಿ|| ಶ್ರೀಟಿ. ಗಂಗಾಧರಪ್ಪ, ಮಾಜಿ ಛೇರ್ಮನ್, ಹೊನ್ನೂರು.
ತಾಯಿ : ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಹೊನ್ನೂರು.

**ಸಿದ್ಧಲಿಂಗೇಶ್ವರ ಮೆಡಿಕಲ್ಸ್, ದಾವಣಗೆರೆ.**


## ಸಿರಿಗೆರೆ ಲಿಂ. ಶ್ರೀಗಳ ಶ್ರದ್ಧಾಂಜಲಿ

ಶ್ರೀ ಮರುಳ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಗ್ರಾಮದ ಯುವಕರು ಸಿರಿಗೆರೆಯ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಶ್ರದ್ಧಾಂಜಲಿ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆಯನ್ನು ಹಮ್ಮಿಕೊಂಡಿದ್ದಾರೆ ಎಂದು ಬಾವಿಕಟ್ಟಿ ಹನುಮಂತಪ್ಪ ತಿಳಿಸಿದ್ದಾರೆ.


**16ನೇ ವರ್ಷದ ಚಿರಸ್ಮರಣೆ**




**ದಿ|| ಬೂಸನೂರು ನೀಲಕಂಠಪ್ಪನವರು**
ಶಿವೈಕ್ಯ 24.09.2005

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು. ನಿಮ್ಮ ಚಿರ ನೆನಪಿನಲ್ಲಿರುವ,

ಮಕ್ಕಳು : **ಬೂಸನೂರು ಪ್ರಕಾಶ್ ಮತ್ತು ಸಹೋದರರು, ಸಹೋದರಿಯರು ಹಾಗೂ ಆತ್ಮೀಯರು**

**ಪ್ರಕಾಶ ಟಿವಿ ಸೆಂಟರ್**
21, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರೋಡ್, ದಾವಣಗೆರೆ. ಫೋ.254565


## ನಿಂಗಪ್ಪ ಬಿ.ಇಟಗಿ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 7ನೇ ಕ್ರಾಸ್ ವಾಸಿ ಮುತ್ತಣ್ಣ (ಕೋಳೂರು) ಇವರ ತಂದೆ ನಿಂಗಪ್ಪ ಭೀಮಪ್ಪ ಇಟಗಿ (85) ಇವರು ದಿನಾಂಕ 23.09.2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.09.2021ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಅಂಗನವಾಡಿಗೆ ಕಳಪೆ ಅಕ್ಕಿ ಪೂರೈಕೆ : ಆರೋಪ

ಮಲೆಬೆನ್ನೂರು, ಸೆ.23- ಕುಂಬಳೂರು ಗ್ರಾಮದ ಅಂಗನವಾಡಿ 'ಬಿ' ಕೇಂದ್ರಕ್ಕೆ ಇತ್ತೀಚಿಗೆ ಸರಬರಾಜು ಮಾಡಲಾದ ಅಕ್ಕಿ ಮತ್ತು ಶೇಂಗಾ ಕಾಳುಗಳು ಕಳಪೆಯಾಗಿವೆ ಎಂದು ಗ್ರಾ.ಪಂ. ಸದಸ್ಯರು ಆರೋಪಿಸಿದ್ದಾರೆ.

ಗ್ರಾಮದ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ನೀಡುವ ಅಕ್ಕಿ ಮತ್ತು ಮಕ್ಕಳಿಗೆ ನೀಡುವ ಶೇಂಗಾ ಕಾಳುಗಳಲ್ಲಿ ಪ್ಲಾಸ್ಟಿಕ್ ರೀತಿಯ ಕಾಳು ಮಿಕ್ಸ್ ಆಗಿದ್ದು, ನೀರಿನಲ್ಲಿ ಹಾಕಿದರೆ ಮುಳುಗದೆ ಕೆಲವು ಕಾಳುಗಳು ತೇಲುತ್ತಿವೆ. ಶೇಂಗಾ ಕಾಳುಗಳು ಸೇವನೆ ಮಾಡಲು ಯೋಗ್ಯವಿಲ್ಲದೇ ವಿಷದ ಕಾಳುಗಳಾಗಿವೆ ಎಂದು ಗ್ರಾ.ಪಂ. ಸದಸ್ಯರಾದ ಎನ್.ಕಲ್ಲೇಶ್, ಕೆ.ಹೆಚ್. ನಾಗೇಶ್ ದೂರಿದರು.



**ಮಲೇಬೆನ್ನೂರು**

ಹರಿಹರ ತಾಲ್ಲೂಕಿಗೆ ಸರಬರಾಜು ಮಾಡಿರುವ ಬಹುತೇಕ ಅಕ್ಕಿ ಹಾಗೂ ಶೇಂಗಾ ಇದೇ ರೀತಿ ಇದ್ದು, ಬೆಳ್ಳೂಡಿ ಗ್ರಾಮದಲ್ಲೂ ಈ ಬಗ್ಗೆ ದೂರು ಕೇಳಿಬಂದಿದೆ.

ಶಂಕೆಯಿರುವ ಎಲ್ಲಾ ಅಕ್ಕಿ ಹಾಗೂ ಶೇಂಗಾ ಕಾಳುಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ, ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಮೇಲೆ ಉಂಟಾಗುವ ತೊಂದರೆ ತಪ್ಪಿಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಗ್ರಾ.ಪಂ. ಉಪಾಧ್ಯಕ್ಷ ಹನುಮಂತಪ್ಪ ಆಗ್ರಹಿಸಿದ್ದಾರೆ.

ಪಿಡಿಓ ಮೂರ್ತಿ, ಗ್ರಾಮದ ಕೆ. ಆಂಜನೇಯ, ಡ್ರೈವರ್ ರಾಜಣ್ಣ, ಅಂಗನವಾಡಿ ಸಿಬ್ಬಂದಿ ಈ ವೇಳೆ ಹಾಜರಿದ್ದರು.

# ಕೃಷಿ ಸಿಂಚಾಯಿ ಯೋಜನೆ ಸೌಲಭ್ಯ ಪಡೆಯಲು ಸೂಚನೆ


**ಹರಿಹರ**

ಹರಿಹರ, ಸೆ.23- ಪ್ರಸಕ್ತ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ವ್ಯವಸ್ಥೆ ಅಳವಡಿಸಲು ಹರಿಹರ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿ ಸಣ್ಣ ಹಾಗೂ ಇತರೆ ವರ್ಗಕ್ಕೆ ಸೇರಿದ ರೈತರಿಗೆ ಸಹಾಯಧನ ನೀಡಲಾಗುವುದು.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹರಿಹರ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿಸಣ್ಣ ರೈತರಿಗೆ ಶೇ.90 ಹಾಗೂ ಇತರೆ ವರ್ಗಕ್ಕೆ ಸೇರಿದ ರೈತರಿಗೆ ಶೇ.45 ರಷ್ಟು ಸಹಾಯಧನ ಲಭ್ಯವಿದ್ದು, ಸಣ್ಣ ಮತ್ತು ಅತಿಸಣ್ಣ ರೈತರು ಕಡ್ಡಾಯವಾಗಿ ಕಂದಾಯ ಇಲಾಖೆಯಿಂದ ನೀಡುವ ದಾಖಲೆಗಳೊಂದಿಗೆ ಹರಿಹರದ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

## ಖೋ-ಖೋ : ರಾಷ್ಟ್ರಮಟ್ಟದ ಚಾಂಪಿಯನ್ ಶಿಪ್‌ಗೆ ಆಯ್ಕೆ





ದಾವಣಗೆರೆ, ಸೆ.23- ಒರಿಸ್ಸಾದ ಭುವನೇಶ್ವರದಲ್ಲಿ ಇಂದಿನಿಂದ ಇದೇ ದಿನಾಂಕ 26 ರವರೆಗೆ ನಡೆಯುವ 40ನೇ ರಾಷ್ಟ್ರಮಟ್ಟದ ಕಿರಿಯರ ಖೋ-ಖೋ ಚಾಂಪಿನ್‌ಶಿಪ್‌ಗೆ ದಾವಣಗೆರೆ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಾದ ಸಿದ್ಧಾರೂಢ ಎಸ್.ಕೆ. ಮತ್ತು ವೇಣುಗೋಪಾಲ್ ಎಸ್. ಆಯ್ಕೆಯಾಗಿದ್ದಾರೆ. ತರಬೇತುದಾರ ಜೆ. ರಾಮಲಿಂಗಪ್ಪ ತರಬೇತಿ ನೀಡುತ್ತಿದ್ದಾರೆ.

## ಕೊರೊನಾ : ಸಾವಿನ ಪರಿಹಾರ 5 ಲಕ್ಷಕ್ಕೆ ಹೆಚ್ಚಿಸಲು ಒತ್ತಾಯ

ನವದೆಹಲಿ, ಸೆ. 23 – ಕೊರೊನಾದಿಂದ ಮೃತರಾದವರ ಕುಟುಂಬಗಳಿಗೆ ತಲಾ 50 ಸಾವಿರ ರೂ.ಗಳ ಪರಿಹಾರಕ್ಕೆ ಕೇಂದ್ರ ಸರ್ಕಾರ ಪ್ರಸ್ತಾಪಿಸಿರುವುದು ಕ್ರೂರ ಅಣಕ ಎಂದಿರುವ ಕಾಂಗ್ರೆಸ್, ಪ್ರತಿ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡುವಂತೆ ಒತ್ತಾಯಿಸಿದೆ.

ಮೊದಲ ದಿನದಿಂದಲೂ ಕೇಂದ್ರ ಸರ್ಕಾರ ಪರಿಹಾರ ನೀಡುವುದರಿಂದ ಹಿಂದೆ ಸರಿಯುತ್ತಿದೆ. ಕೊರೊನಾದಿಂದ ಮೃತರಾದ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವ ಅಗತ್ಯವಿದೆ ಎಂದು ತಮ್ಮ ಪಕ್ಷದ ನಾಯಕತ್ವ ಹೇಳುತ್ತಾ ಬಂದಿದೆ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯ ಶ್ರೀನಟೆ ಹೇಳಿದ್ದಾರೆ.

# ನಗರ ಪ್ರದೇಶಗಳಲ್ಲಿ 500 ಪಡಿತರ ಚೀಟಿಗೊಂದು ನ್ಯಾಯಬೆಲೆ ಅಂಗಡಿ



ಬೆಂಗಳೂರು, ಸೆ.23- ನಗರ ಪ್ರದೇಶದಲ್ಲಿ ಸಾವಿರಾರು ಪಡಿತರ ಚೀಟಿಗೆ ಒಂದು ನ್ಯಾಯಬೆಲೆ ಅಂಗಡಿ ಇದ್ದು, ಇದನ್ನು ಶೀಘ್ರದಲ್ಲೇ ಸರಿಪಡಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ್ ವಿ.ಕತ್ತಿ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ವೆಂಕಟರಾವ್ ನಾಡಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಿಯಮಗಳ ಪ್ರಕಾರ 500 ಪಡಿತರ ಚೀಟಿಗಳಿಗೆ ಒಂದು ನ್ಯಾಯ ಬೆಲೆ ಅಂಗಡಿ ಇರಬೇಕು, ಕೆಲವೆಡೆ ಸಾವಿರ ಪಡಿತರ ಚೀಟಿಗೆ ಒಂದೇ ನ್ಯಾಯ ಬೆಲೆ ಅಂಗಡಿ ಇದೆ, ಇದನ್ನು ಸರಿಪಡಿಸಲಾಗುವುದು ಎಂದರು.

ಪಟ್ಟಣ ಪ್ರದೇಶದಲ್ಲಿ ಕನಿಷ್ಠ 800 ಹಾಗೂ ಗ್ರಾಮೀಣ ಭಾಗದಲ್ಲಿ ಕನಿಷ್ಠ 500 ಪಡಿತರ ಚೀಟಿಗಳಿಗೆ ಒಂದು ನ್ಯಾಯ ಬೆಲೆ ಅಂಗಡಿ ತೆರೆಯಲು ಅವಕಾಶವಿದೆ, ಹೊಸ ನ್ಯಾಯಬೆಲೆ ಅಂಗಡಿಯನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿ ತೆರೆಯಲು ಆಯಾ ಜಿಲ್ಲೆಯ ಜಂಟಿ ಉಪ ನಿರ್ದೇಶಕರಿಗೆ ಅವಕಾಶ ನೀಡಿದ್ದೇವೆ.

ಕೆಲವು ಕಡೆ ವಂಶ ಪಾರಂಪರ್ಯ ವಾಗಿ ನ್ಯಾಯ ಬೆಲೆ ಅಂಗಡಿ ನಡೆಸುತ್ತಿದ್ದಾರೆ. ಶ್ರೀಮಂತರು, ಜಮೀ ನುದಾರರೂ ನ್ಯಾಯಬೆಲೆ ಅಂಗಡಿ ಗಳನ್ನು ನಡೆಸುತ್ತಿದ್ದಾರೆ, ಇಂಥವರನ್ನು ಪತ್ತೆ ಹಚ್ಚಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀಮಂತರು, ಜಮೀನುದಾರರು ನ್ಯಾಯಬೆಲೆ ಅಂಗಡಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದರೆ, ಅಂತಹ ಅಂಗಡಿಗಳನ್ನು ರದ್ದುಪಡಿಸಿ, ಬೇರೆ ಯವರಿಗೆ ನೀಡಲಾಗುವುದು ಎಂದರು.

## ಪಟೇಲ್ ಬಡಾವಣೆಯಲ್ಲಿ ಇಂದು ನೀರು ಪೂರೈಕೆ ವ್ಯತ್ಯಯ

ಜೆ.ಹೆಚ್.ಪಟೇಲ್ ಬಡಾವಣೆಯ ಮೇಲ್ಮಟ್ಟದ ಜಲಾಗಾರವನ್ನು ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯ ಪೈಪ್‌ಲೈನ್‌ಗಳಿಗೆ ಜೋಡಣೆ ಮಾಡಬೇಕಾಗಿರುವುದರಿಂದ ಇಂದು ನೀರು ಸರಬರಾಜನ್ನು ಸ್ಥಗಿತಗೊಳಿಸಲಾಗುತ್ತದೆ.

ಜಲಸಿರಿ ಯೋಜನೆ ಅಡಿಯಲ್ಲಿ ಕೆ.ಯು.ಐ.ಡಿ.ಎಫ್. ಸಿಯವರು ನಗರದೆಲ್ಲೆಡೆ ನಿರಂತರ ಕುಡಿಯುವ ನೀರಿನ ಪೈಪ್‌ಲೈನ್‌ಗಳನ್ನು ಅಳವಡಿಸುವ ಕಾಮಗಾರಿ ಹಾಗೂ ಮೇಲ್ಮಟ್ಟದ ಜಲಸಂಗ್ರಹಗಾರಗಳ ಪುನಶ್ಚೇತನದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಎಂದು ಎಂದು ದೂಡಾ ಆಯುಕ್ತರು ತಿಳಿಸಿದ್ದಾರೆ.

## ಜಾತಿ ಗಣತಿ ಕಷ್ಟ : ಕೇಂದ್ರ

**(1ನೇ ಪುಟದಿಂದ)** ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಪದೇ ಪದೇ ಮನವಿ ಸಲ್ಲಿಸಿದರೂ ಮಾಹಿತಿ ನೀಡುತ್ತಿಲ್ಲ ಎಂದು ಮಹಾರಾಷ್ಟ್ರ ಸರ್ಕಾರ ಪ್ರಮಾಣ ಪತ್ರದಲ್ಲಿ ಹೇಳಿದೆ.

2021ರ ಗಣತಿಗಾಗಿ ಕೇಂದ್ರ ಸರ್ಕಾರ ಹಲವಾರು ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಇದರ ಅನ್ವಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜಾತಿ ಗಣತಿಗೆ ಸರ್ಕಾರ ನಿರ್ಧರಿಸಿದೆ. ಆದರೆ, ಈ ಗಣತಿಯಲ್ಲಿ ಹಿಂದುಳಿದ ವರ್ಗಗಳನ್ನು ಸೇರ್ಪಡೆ ಮಾಡಿಲ್ಲ.

# ಪೌರ ಕಾರ್ಮಿಕರ ಸೇವೆ ಶ್ಲ್ಯಾಘನೀಯ

## ಹರಿಹರದ ಕಾರ್ಯಕ್ರಮದಲ್ಲಿ ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ



ಹರಿಹರ, ಸೆ.23- ಪೌರ ಕಾರ್ಮಿಕರು ಕಾಯಕವೇ ಕೈಲಾಸ ಎಂದು ಭಾವಿಸಿ, ನಗರವನ್ನು ಸ್ವಚ್ಛ ಮಾಡುವ ಕಾಯಕ ನಿಜಕ್ಕೂ ಶ್ಲ್ಯಾಘನೀಯ ಎಂದು ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಹೇಳಿದರು.

ಇಲ್ಲಿನ ನಗರಸಭೆ ಆವರಣದಲ್ಲಿ ಇಂದು ನಡೆದ ಪೌರ ಕಾರ್ಮಿಕರ ದಿನಾಚರಣೆ ಸಮಾರಂಭಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

ಪೌರ ಕಾರ್ಮಿಕರು ನಗರವನ್ನು ಸ್ವಚ್ಛತೆಯಿಂದಿರುವಂತೆ ಮಾಡುವಾಗ ಅನೇಕ ಸಮಸ್ಯೆಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಆದರೆ ಅವರು ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ತಮಗೆ ವಹಿಸಿರುವ ಕೆಲಸವನ್ನು ಬಹಳ ಜವಾಬ್ದಾರಿಯಿಂದ ಮಾಡುವ ಮೂಲಕ ನಗರದ ಅಂದ ಚೆಂದವನ್ನು ಹೆಚ್ಚು ಮಾಡುತ್ತಾರೆ. ನಗರ ಸ್ವಚ್ಛವಾಗಿ ಇರುವಂತೆ ಮಾಡುವ ನಗರಸಭೆಯ ಪೌರ ಕಾರ್ಮಿಕರ ಒಳಿತಿಗಾಗಿ ಅನೇಕ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ. ಅವುಗಳನ್ನು ಕಾರ್ಮಿಕರು ಸದ್ಬಳಕೆ ಮಾಡಿಕೊಂಡು ಉತ್ತಮ ಜೀವನ ಶೈಲಿಯನ್ನು ರೂಪಿಸಿಕೊಳ್ಳಿ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಎಂದರು.

ನಗರಸಭೆ ಅಧ್ಯಕ್ಷರಾದ ರತ್ನ ಡಿ. ಉಜ್ಜೇಶ್ ಮಾತನಾಡಿ, ಪೌರ ಕಾರ್ಮಿಕರ ಕುಟುಂಬಕ್ಕೆ ಸರ್ಕಾರ ವಸತಿ ವ್ಯವಸ್ಥೆ ಒದಗಿಸುವ ಮೂಲಕ ಅವರನ್ನು ಸಬಲರನ್ನಾಗಿ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಈ ವೇಳೆ ನಗರಸಭೆ ಉಪಾಧ್ಯಕ್ಷ ಎಂ.ಎಸ್. ಬಾಬುಲಾಲ್, ನಗರಸಭೆ ಸದಸ್ಯರಾದ ದಾದಾ ಖಲಂದರ್, ರತ್ನಮ್ಮ, ಹನುಮಂತಪ್ಪ, ಪಿ.ಎನ್. ವಿರೂಪಾಕ್ಷ ಇನ್ನಿತರರು ಮಾತನಾಡಿದರು.

ನಗರಸಭೆ ಎಇಇ ಬಿರಾದಾರ, ಸಿಬ್ಬಂದಿಗಳಾದ ಆರ್.ಓ. ಮಂಜುನಾಥ್, ವಸಂತ್, ಅಣ್ಣಪ್ಪ, ರಮೇಶ್, ತಿಪ್ಪೇಸ್ವಾಮಿ, ಅಸ್ಲಾಂ, ಬಸವರಾಜ್, ಮಂಜುನಾಥ್, ತಿಮ್ಮಪ್ಪ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಸದಾಶಿವ, ದಯಾನಂದ, ವಿನಾಯಕ, ಇತರರು ಹಾಜರಿದ್ದರು.

# ಪೌರ ಕಾರ್ಮಿಕರ ಸೇವೆ ಗೌರವಿಸಬೇಕು

## ಜಗಳೂರಿನ ಕಾರ್ಯಕ್ರಮದಲ್ಲಿ ಯೋಜನಾ ನಿರ್ದೇಶಕರಾದ ಜಿ.ನಜ್ಮಾ



ಜಗಳೂರು, ಸೆ.23- ಸಾರ್ವಜನಿಕರ ಆರೋಗ್ಯಕ್ಕಾಗಿ ಶ್ರಮಿಸುವ ಪೌರ ಕಾರ್ಮಿಕರ ಸೇವೆಗಳನ್ನು ಗೌರವಿಸಬೇಕು ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಜಿ. ನಜ್ಮಾ ಅವರು ಕರೆ ನೀಡಿದರು.

ಪಟ್ಟಣದ ಪಟ್ಟಣ ಪಂಚಾಯ್ತಿ ವತಿಯಿಂದ ಪಂಚಾಯ್ತಿ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕ ವಲಯದಲ್ಲಿ ಯಾರೂ ಮಾಡದಂತಹ ಸ್ವಚ್ಛತಾ ಕಾರ್ಯವನ್ನು ತಾಳ್ಮೆಯಿಂದ ಮಾಡುವ ಶಕ್ತಿ ಪೌರ ಕಾರ್ಮಿಕರಲ್ಲಿದೆ. ನಗರದ ನಾಗರಿಕರ ಆರೋಗ್ಯ ಕಾಪಾಡುವ ಇವರನ್ನು ಕೀಳು ಮಟ್ಟದಲ್ಲಿ ಕಂಡರೆ ಅಹಿತಕರ ಘಟನೆಗೆ ಕಾರಣವಾಗುತ್ತದೆ. ಪೌರ ಕಾರ್ಮಿಕರು ನಮಗೋಸ್ಕರ ಎಂಬ ಭಾವನೆ ಮೈಗೂಡಿಸಿಕೊಂಡರೆ ಪೌರ ಕಾರ್ಮಿಕ ದಿನಾಚರಣೆಗೆ ಅರ್ಥ ಸಿಗುವುದು ಎಂದು ತಿಳಿಸಿದರು.

ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿ, ಪೌರ ಕಾರ್ಮಿಕರು ಪ್ರತಿನಿತ್ಯ ಬೆಳಿಗ್ಗೆ ಸ್ವಯಂಪ್ರೇರಿತರಾಗಿ ಸ್ವಚ್ಛತೆಯ ಕಾಯಕದಲ್ಲಿ ತೊಡಗಿ ಸಾರ್ವಜನಿಕರ ಆರೋಗ್ಯ ಕಾಪಾಡುತ್ತಿರುವುದು ಶ್ಲ್ಯಾಘನೀಯ ಎಂದರು.

ಪೌರ ಸೇವಾ ನೌಕರರ ರಾಜ್ಯಾಧ್ಯಕ್ಷ ಪ್ರಸಾದ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು, 2012ರಲ್ಲಿ ಪೌರ ಕಾರ್ಮಿಕರ ದಿನಾಚರಣೆಗೆ ಆದೇಶಿಸಿದರು. ಇಂದಿಗೆ ದಶಮಾನೋತ್ಸವ ಆಚರಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಪ್ರಸಕ್ತ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಾರ್ಷಿಕವಾಗಿ 3,500 ರಿಂದ 7 ಸಾವಿರದವರೆಗೆ ವಿಶೇಷ ಭತ್ಯೆ ಹೆಚ್ಚಿಸಿರುವುದು ಅಭಿನಂದನಾರ್ಹರು ಎಂದರು.

ಪೌರ ಕಾರ್ಮಿಕರು ಕೆಜಿಐಡಿ, ಇಪಿಎಫ್ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅಲ್ಲದೆ ನೇರ ನೇಮಕಾತಿಯಲ್ಲಿ ಕೆಲಸ ಮಾಡುವವರಿಗೆ ವಿಶೇಷ ನೇಮಕಾತಿಯಡಿ ಮೀಸಲಾತಿ ರದ್ದುಪಡಿಸಿ, ಎಲ್ಲರಿಗೂ ನೇಮಕಾತಿ ಮಾಡಬೇಕು ಎಂಬುದು ನಮ್ಮ ಬೇಡಿಕೆಗಳಾಗಿವೆ ಎಂದು ತಿಳಿಸಿದರು.

ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ಮಾತನಾಡಿ, ಪೌರ ಕಾರ್ಮಿಕರು ಶ್ರಮದ ಹಣವನ್ನು ದುಂದುವೆಚ್ಚ ಮಾಡದೆ, ಕುಟುಂಬ ನಿರ್ವಹಣೆಗೆ ಉಪಯೋಗಿಸಿ ಉತ್ತಮ ಜೀವನ ನಡೆಸಬೇಕು ಎಂದು ಹಿತ ನುಡಿದರು.

ಎಇಇ ಪ್ರಸನ್ನಕುಮಾರ್, ಉಪಾಧ್ಯಕ್ಷರಾದ ಲಲಿತ ಶಿವಣ್ಣ, ಪೌರ ಸೇವಾ ಕಾರ್ಮಿಕರ ಸಂಘದ ತಾಲ್ಲೂಕು ಅಧ್ಯಕ್ಷ ಎ.ಕೆ. ಬಸವರಾಜ್, ಉಪಾಧ್ಯಕ್ಷ ಸಿ. ಚಿನ್ನಪ್ಪ, ಕಂದಾಯ ನಿರೀಕ್ಷಕ ಸಂತೋಷ್, ಆರೋಗ್ಯ ನಿರೀಕ್ಷಕ ಖಿಫಾಯತ್, ಪ.ಪಂ. ಸದಸ್ಯರಾದ ನವೀನ್ ಕುಮಾರ್, ದೇವರಾಜ್, ರೇವಣ್ಣ, ಪಾಪಲಿಂಗಪ್ಪ, ಮಂಜಮ್ಮ, ರಮೇಶ್ ಇನ್ನಿತರರು ಭಾಗವಹಿಸಿದ್ದರು.

# ಐದು ಜಿಲ್ಲೆಗಳಲ್ಲಿ ಗ್ರಾಮ ಸೇವಾ ಯೋಜನೆ

## ಜನವರಿ 26ರ ಗಣರಾಜ್ಯೋತ್ಸವ ದಿನದಂದು ಪ್ರಾಯೋಗಿಕ ಜಾರಿ: ಸಿಎಂ ಬೊಮ್ಮಾಯಿ

ಬೆಂಗಳೂರು, ಸೆ. 23 - ನಾಗರಿಕ ಸೇವೆಗಳನ್ನು ಗ್ರಾಮ ಪಂಚಾಯತ್ ಹಂತದಲ್ಲಿಯೇ ಆನ್ ಲೈನ್ ಮೂಲಕ ಒದಗಿಸುವ ವಿನೂತನ 'ಗ್ರಾಮ ಸೇವಾ' ಯೋಜನೆಯನ್ನು ಪ್ರಾಯೋಗಿಕವಾಗಿ ರಾಜ್ಯದ 5 ಜಿಲ್ಲೆಗಳಲ್ಲಿ ಜನವರಿ 26ರ ಗಣರಾಜ್ಯೋತ್ಸವ ದಿನದಂದು ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಅಮೃತ ಗ್ರಾಮ ಪಂಚಾಯತ್ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಅಭಿವೃದ್ಧಿ ಜನರ ಸುತ್ತ ಆಗಬೇಕು, ಜನರು ಅಭಿವೃದ್ಧಿ ಸುತ್ತ ಸುತ್ತುವಂತಾಗಬಾರದು. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯ್ತಿಗಳು ಜನರಿಗೆ ವಿವಿಧ ಸೇವೆಗಳನ್ನು ಒದಗಿಸುವ ಗ್ರಾಮ ಸೇವಾ ಸಂಸ್ಥೆಯಾಗಬೇಕು ಎಂದರು.

ಮನೆ ಬಾಗಿಲಿಗೆ ಸೌಲಭ್ಯಗಳು ತಲುಪಬೇಕು, ಈ ಆಶಯದೊಂದಿಗೆ 'ಗ್ರಾಮ ಸೇವಾ ಯೋಜನೆ'ಯನ್ನು ಜಾರಿಗೊಳಿಸಲಾಗುವುದು, ಇದಕ್ಕೆ ಅಧಿಕಾರಿಗಳು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.


ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯತ್‌ಗಳ ಸರ್ವಾಂಗೀಣ ಅಭಿವೃದ್ಧಿ ಗುರಿ ಹೊಂದಲಾಗಿದೆ, ಇದಕ್ಕಾಗಿ ಪ್ರತಿ ಪಂಚಾಯ್ತಿಗೆ ಸರಾಸರಿ 3 ಕೋಟಿ ರೂ. ಗಳಂತೆ ಸುಮಾರು 2300 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಮಾರ್ಚ್ 31 ರೊಳಗೆ ಯೋಜನೆ ಪೂರ್ಣಗೊಳಿಸಿದ ಪಂಚಾಯತ್‌ಗಳಿಗೆ 25 ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗುವುದು ಎಂದು ಬೊಮ್ಮಾಯಿ ಹೇಳಿದ್ದಾರೆ.

ಎಲ್ಲ ಗ್ರಾಮ ಪಂಚಾಯ್ತಿಗಳು ಯೋಜನೆ ಪೂರ್ಣಗೊಳಿಸಿದರೆ, ಮುಂದಿನ ವರ್ಷ 1500 ಪಂಚಾಯತ್‌ಗಳಲ್ಲಿ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗುವುದು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆ ಜಲ ಜೀವನ್ ಮಿಷನ್ ಅನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು 2000 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಗ್ರಾಮಾಭಿವೃದ್ಧಿಯಾದಾಗ ಅಲ್ಲಿನ ಜನರ ಜೀವನ ಮಟ್ಟ ಸುಧಾರಿಸುತ್ತದೆ, ಗ್ರಾಮಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಬೇಕು, ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಹಾಗೂ ಸಹಕಾರಿ ಸಂಸ್ಥೆಗಳಿಂದ ಮಾತ್ರ ಈ ಕಾರ್ಯ ಸಾಧ್ಯ.

ರಾಜ್ಯದ ತಲಾ ಆದಾಯದಲ್ಲಿ ಶೇ. 25 ರಿಂದ 30 ರಷ್ಟು ಜನಸಂಖ್ಯೆಯ ಕೊಡುಗೆ ಇದ್ದು, ಈ ಪ್ರಮಾಣ ಹೆಚ್ಚಾಗಿ ಆರ್ಥಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆದಾಯ ಹೆಚ್ಚಿಸಿಕೊಳ್ಳುವುದಲ್ಲದೆ, ರಾಜ್ಯದ ತಲಾ ಆದಾಯ ಹೆಚ್ಚಳಕ್ಕೆ ಜನತೆ ಕೊಡುಗೆ ನೀಡುವಂತಾಗಬೇಕು ಎಂದು ಆಶಿಸಿದರು.



ಅಮೃತ ಗ್ರಾಮ ಪಂಚಾಯತ್ ಯೋಜನೆಗೆ ಚಾಲನೆ ನೀಡಿದ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ರಾಜ್ಯದ ಗ್ರಾಮ ಪಂಚಾಯತ್‌ಗಳ ಕಾರ್ಯನಿರ್ವಹಣೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಮಾತನಾಡಿ, ಎಲ್ಲ ಗ್ರಾಮ ಪಂಚಾಯತ್‌ಗಳು 2024 ರೊಳಗೆ ಡಿಜಿಟಲ್ ಕನೆಕ್ಟಿವಿಟಿ ಹೊಂದಿರಬೇಕು, ರಾಜ್ಯದಲ್ಲಿಯೂ ಈ ಯೋಜನೆಯನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸಬೇಕು ಎಂದು ಸೂಚಿಸಿದರು.

ಅಕ್ಟೋಬರ್ 2 ರಂದು ದೇಶಾದ್ಯಂತ ಗ್ರಾಮ ಪಂಚಾಯತ್‌ಗಳು ಗ್ರಾಮ ಸಭೆ ನಡೆಸಿ, ನನ್ನ ಗ್ರಾಮ-ನನ್ನ ಪರಂಪರೆ ಎಂಬ ಘೋಷಣೆಯಡಿ ಗ್ರಾಮಕ್ಕಾಗಿ ಶ್ರಮಿಸಿದ ಹಿರಿಯರು, ವಿದ್ವಾಂಸರು, ಸ್ವಾತಂತ್ರ್ಯ ಹೋರಾಟಗಾರರು ಮೊದಲಾದ ಗಣ್ಯರನ್ನು ಸ್ಮರಿಸುವ ಕೆಲಸವಾಗಬೇಕು, ಅಕ್ಟೋಬರ್ 1 ರಿಂದ 15 ರ ವರೆಗೆ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಕರೆ ನೀಡಿದರು.

ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಗುರಿ ಹೆಚ್ಚಿಸಲು ರಾಜ್ಯದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮಾಡಿದ ಮನವಿಗೆ ಸ್ಪಂದಿಸಿದ ಸಚಿವರು, ಈ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

# ಮೀಸಲಾತಿ: ಆಡಳಿತಾರೂಢ ಸದಸ್ಯರಿಂದಲೇ ಧರಣಿ

**(1ನೇ ಪುಟದಿಂದ)** ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? ಎಂದು ಪ್ರಶ್ನಿಸಿದರು. ವಿವಿಧ ಸಮುದಾಯಗಳ ಮಠಾಧೀಶರು, ಪ್ರತಿಭಟನೆ, ಹೋರಾಟ ನಡೆಸುತ್ತಿದ್ದಾರೆ, ಪಂಚಮಸಾಲಿ ಸಮುದಾಯದ ಶ್ರೀಗಳು ಮಲೆ ಮಹದೇಶ್ವರ ಬೆಟ್ಟದಿಂದ ಹೋರಾಟ ಆರಂಭಿಸಿದ್ದಾರೆ, ಇದು ಚಳವಳಿ ಸ್ವರೂಪ ಪಡೆದುಕೊಳ್ಳುವ ಮೊದಲೇ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಸೆಪ್ಟೆಂಬರ್ 15ರೊಳಗೆ ಸರ್ಕಾರ ಈ ಎಲ್ಲ ಸಮುದಾಯಗಳಿಗೆ ಮೀಸಲಾತಿ ನೀಡುವ ಭರವಸೆ ಕೊಟ್ಟಿತ್ತು, ಆರು ತಿಂಗಳ ಗಡುವು ಮುಗಿದಿದೆ, ಸರ್ಕಾರ ಇನ್ನೂ ಏಕೆ ಸುಮ್ಮನಿದೆ? ಎಂದರು.

ಇದಕ್ಕೆ ಅರವಿಂದ ಬೆಲ್ಲದ್ ದನಿಗೂಡಿಸಿ, ಇದು ಸಮುದಾಯದ ಪ್ರಶ್ನೆ. ಸರ್ಕಾರ ಏನಾದರೊಂದು ನಿರ್ಧಾರ ಪ್ರಕಟಿಸಬೇಕು ಎಂದು ಪಟ್ಟುಹಿಡಿದರು. ಸರ್ಕಾರದ ಪರವಾಗಿ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಮಾತನಾಡಿ, ಉತ್ತರ ನೀಡಲು ಸರ್ಕಾರ ಸಿದ್ಧವಿದೆ ಎಂದಾಗ ಶಾಸಕರು ವಿರೋಧ ವ್ಯಕ್ತಪಡಿಸಿ, ಮುಖ್ಯಮಂತ್ರಿ ಇಲ್ಲವೇ, ಕಾನೂನು ಸಚಿವರು ಉತ್ತರ ಕೊಡಬೇಕು, ಸದನದಲ್ಲಿ ಇಬ್ಬರೂ ಇಲ್ಲವೆಂದ ಮೇಲೆ ಯಾರಿಗೆ ಪ್ರಶ್ನೆ ಕೇಳಬೇಕು? ಎಂದು ಏರಿದ ದನಿಯಲ್ಲಿ ಮಾತನಾಡಿದರು.

ಮಧ್ಯೆ ಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಮತ್ತು ಕಾನೂನು ಸಚಿವರು ವಿಧಾನ ಪರಿಷತ್ತಿನ ಕಲಾಪದಲ್ಲಿ ಪಾಲ್ಗೊಂಡಿದ್ದಾರೆ, ನಿಮಗೆ ತಕ್ಷಣವೇ ಉತ್ತರ ಬೇಕೆಂದರೆ ಸಚಿವರು ನೀಡಲಿದ್ದಾರೆ ಎಂದರು.

ಇದರಿಂದ ಅಸಮಾಧಾನಗೊಂಡ ಯತ್ನಾಳ್ ಮತ್ತು ಅರವಿಂದ ಬೆಲ್ಲದ್, ಇಂಥ ಮಹತ್ವದ ವಿಚಾರದಲ್ಲೂ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ, ಹಿಂದಿನ ಮುಖ್ಯಮಂತ್ರಿ ಕೊಟ್ಟ ಭರವಸೆಯೂ ಈಡೇರಲಿಲ್ಲ, ಈಗಿನ ಮುಖ್ಯಮಂತ್ರಿಯೂ ಇದನ್ನೇ ಮಾಡುತ್ತಿದ್ದಾರೆ ಎಂದು ಆರೋಪಿಸಿ ಧರಣಿಗೆ ಮುಂದಾದರು.

ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಉಪಸಭಾ ನಾಯಕ ಆರ್.ವಿ.ದೇಶಪಾಂಡೆ ಮಾತನಾಡಿ, ಸರ್ಕಾರ ಉತ್ತರ ನೀಡಲು ಸಿದ್ಧವಿರುವುದಾಗಿ ಹೇಳಿದೆ, ಮುಖ್ಯಮಂತ್ರಿ ಮತ್ತು ಕಾನೂನು ಸಚಿವರು ಮೇಲ್ಮನೆ ಕಲಾಪದಲ್ಲಿ ಪಾಲ್ಗೊಳ್ಳಲು ಹೋಗಿದ್ದಾರೆ, ಸದನದಲ್ಲಿ ಧರಣಿ ಮಾಡುವುದು ಸರಿಯಲ್ಲ, ಮುಖ್ಯಮಂತ್ರಿ ಅಥವಾ ಸಂಬಂಧಪಟ್ಟವರು ಉತ್ತರ ಕೊಡುತ್ತಾರೆ, ಧರಣಿ ಹಿಂದಕ್ಕೆ ಪಡೆಯಿರಿ ಎಂದು ಸಲಹೆ ಮಾಡಿದರು.

ಈ ವೇಳೆ ಜೆ.ಎನ್. ಗಣೇಶ್, ವಾಲ್ಮೀಕಿ ಸಮುದಾಯಕ್ಕೂ ಮೀಸಲಾತಿ ನೀಡಬೇಕೆಂದು ಪ್ರತಿಭಟಣೆಗೆ ಮುಂದಾದರು.

ಸಿದ್ದರಾಮಯ್ಯ ಮಾತನಾಡಿ, ಸರ್ಕಾರ ಉತ್ತರ ಕೊಡಲು ಸಿದ್ಧವಿದೆ, ನಿಮ್ಮ ಸ್ಥಳಗಳಿಗೆ ತೆರಳಿ ಎಂದು ಸಮಾಧಾನ ಪಡಿಸಿದಾಗ ಧರಣಿ ಕೈಬಿಟ್ಟು ಸದಸ್ಯರು ಸ್ವಸ್ಥಾನಗಳಿಗೆ ಮರಳಿದರು.

# ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಕರೆ



**ಹರಪನಹಳ್ಳಿ ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್**

ಹರಪನಹಳ್ಳಿ, ಸೆ.23- ಶಿಕ್ಷಣದಿಂದ ಮಾತ್ರ ಬದಲಾವಣೆ ಸಾಧ್ಯ. ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಈ ದೇಶ, ರಾಜ್ಯದಲ್ಲಿನ ಉನ್ನತ ಹುದ್ದೆಗಳಾದ ಐಎಎಸ್, ಐಪಿಎಸ್, ಕೆಎಎಸ್ ಹುದ್ದೆಗಳನ್ನು ಅಲಂಕರಿಸುವಂತೆ ಮಾಡಿ ಎಂದು ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಹೇಳಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಪೌರ ನೌಕರರ ಸೇವಾ ಸಂಘದ ತಾಲ್ಲೂಕು ಘಟಕದಿಂದ ಏರ್ಪಡಿಸಿದ್ದ 10ನೇ ವರ್ಷದ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ವಾಭಿಮಾನದಿಂದ ಬದುಕಿ, ಸಂಘಟನೆಯಿಂದ ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳಿ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ತತ್ವದಡಿಯಲ್ಲಿ ಕೆಲಸ ಮಾಡಿರಿ ಎಂದರಲ್ಲದೆ, ಪೌರ ಕಾರ್ಮಿಕರನ್ನು ಯಾರು ಕೀಳಾಗಿ ಕಾಣಬೇಡಿ. ಹಸಿ ಕಸ, ಒಣ ಕಸವನ್ನು ಬೇರ್ಪಡಿಸಿ ನೀಡಿ, ನಮ್ಮ ಪೌರ ಕಾರ್ಮಿಕರಿಗೆ ಸಹಕರಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ ಮಾತನಾಡಿ, ಪೌರಕಾರ್ಮಿಕರು ಕಾಯಕ ಯೋಗಿಗಳಂತೆ. ದೇಶದ ಗಡಿಯಲ್ಲಿ ಸೈನಿಕರು ರಕ್ಷಿಸಿದರೆ, ಗಡಿಯ ಒಳಗೆ ಪೌರ ಕಾರ್ಮಿಕರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಪರಿಸರವನ್ನು ಸ್ವಚ್ಛಗೊಳಿಸುವ ಮೂಲಕ ನಮ್ಮ ಆರೋಗ್ಯವನ್ನು ಕಾಪಾಡುತ್ತಾರೆ. ಇವರಲ್ಲಿ ಹಲವರಿಗೆ ವಸತಿ ಇಲ್ಲ. ಮುಂದಿನ ದಿನಗಳಲ್ಲಿ ಸರ್ಕಾರದ ಗಮನ ಸೆಳೆದು, ಹಂತ ಹಂತವಾಗಿ ವಸತಿ ಕಲ್ಪಿಸುವ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಪುರಸಭೆ ಸದಸ್ಯ ಡಿ. ಅಬ್ದುಲ್ ರಹಿಮಾನ್ ಸಾಬ್ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ನಿಮ್ಮ ಸೇವೆ ಅನನ್ಯ ಎಂದ ಅವರು ನಿಮ್ಮ ಮಕ್ಕಳು ಮುಂಬರುವ ದಿನಗಳಲ್ಲಿ ಪುರಸಭೆಯ ಅಧಿಕಾರಿಯಾಗಿ, ಸದಸ್ಯರಾಗಿ ಬರಲಿ ಎಂದು ಹಾರೈಸಿದರು.

ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತ್ಕರ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ ಸಣ್ಣಹಾಲಪ್ಪ, ಸದಸ್ಯರಾದ ಗೊಂಗಡಿ ನಾಗರಾಜ್, ಜಾಕೀರ್ ಹುಸೇನ್ ಸರ್ಖಾವಸ್, ಎಂ.ಕೆ. ಜಾವೀದ್, ಉದ್ದಾರ ಗಣೇಶ್, ಎಸ್. ಶೋಭ, ಕಛೇರಿ ವ್ಯವಸ್ಥಾಪಕ ಅಶೋಕ್, ಹಿರಿಯ ಆರೋಗ್ಯ ನಿರೀಕ್ಷಕ ಬಿ. ಮಂಜುನಾಥ್, ಸಂಘದ ಅಧ್ಯಕ್ಷ ಕೆ. ಹನುಮಂತಪ್ಪ, ಉಪಾಧ್ಯಕ್ಷ ಹೆಚ್.ಕೆ. ಶಿವಪ್ಪ ಸೇರಿದಂತೆ ಮುಖಂಡರಾದ ಚಿಕ್ಕೇರಿ ಬಸಪ್ಪ, ಕೌಟಿ ವಾಗೀಶ್, ತಳವಾರ ಅಜ್ಜಯ್ಯ ಇನ್ನಿತರರಿದ್ದರು.

## ಜಿಲ್ಲಾ ಯುವ ಸಂಘ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.23 - ಭಾರತ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ಬರುವ ನೆಹರು ಯುವ ಕೇಂದ್ರದ ವತಿಯಿಂದ ಜಿಲ್ಲೆಯ ಅತ್ಯುತ್ತಮ ಯುವಕ ಅಥವಾ ಯುವತಿ ಸಂಘಗಳಿಗೆ ಕೊಡಮಾಡುವ ಜಿಲ್ಲಾ ಯುವ ಸಂಘ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆ ದಿನವಾಗಿದೆ.

ಪ್ರಸಕ್ತ ಸಾಲಿನಲ್ಲಿ ಕ್ರೀಡೆ, ಸಾಂಸ್ಕೃತಿಕ, ರಾಷ್ಟ್ರೀಯ ಭಾವೈಕ್ಯತೆ, ಕೋಮು ಸೌಹಾರ್ದತೆ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಶಿಕ್ಷಣ ಮುಂತಾದ ಸಾಮಾಜಿಕ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆಗೈದಿರುವ ಸಂಘಗಳಿಗೆ ಪ್ರಶಸ್ತಿ ನೀಡಲಾಗುತ್ತಿದ್ದು, ಪ್ರಶಸ್ತಿಯು 25 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

ವಿವರಕ್ಕೆ ಜಿಲ್ಲಾ ಯುವಜನ ಅಧಿಕಾರಿಗಳು, ನೆಹರು ಯುವ ಕೇಂದ್ರ ದಾವಣಗೆರೆ, ಕೊಠಡಿ ಸಂಖ್ಯೆ-42, 2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ, ಪಿ.ಬಿ ರಸ್ತೆ, ದೂ.ಸಂ.08192-263122 ಇವರನ್ನು ಸಂಪರ್ಕಿಸಬಹುದು.

WAREHOUSE AVAILABLE FOR RENT ON LONG/SHORT/DAILY TERM BASIS AT RAVI MILL PREMISES

Interested Parties may contact at :
M/s R.Hanumanthappa & Son
Hanumanthappa Buildings,
Poona - Bangalore Road, Davangere - 577 002.
Phone No's. : 258834 / 258836

**IN THE COURT OF THE HON'BLE PRINCIPAL DISTRICT AND SESSIONS JUDGE AT DAVANAGERE**
**P& Sc No. 1/2020**

*Petitioner :* **1. Smt.Sindhu w/o Chandrashekaraiah,** Aged 40 years
**2. Smt. Vijayamma w/o H.V. Shivaswamy,** Aged 68 years
Both are R/o siddeshwara prasanna, 60 feet Road, Sharavathi Nagara, shivamogga
V/s *Respondent:* NIL

**Notice**

Take notice that the above named petitioners have filed the above petition for grant of Probate with respect to the Registered will dated 18.11.1996 executed by Smt.Halamma W/o Late, chandrashekharaiah who has bequeathed the schedule property in favour of above petitioner No. 1 and 2.
The above petition is fixed for hearing on 26/10/21 at 11.AM any persons having objections to grant such Probate can appear either personally or through counsel representing them on that day. otherwise the petition will be heard and decided in the absence of any such persons.

**SHEDULE OF PROPERTY**

**1.** The land bearing Sy. No. 373/B measuring 1- acere 0-Gunta wet irrigated land situated at Kulagatte village, Honnali Taluk, out of which eastern side from Bhadra Channel measuring 20 guntas to the mother of 1st petitioner Smt. Rathnamma W/o Maheshwaraiah bounded by" **East:** the land in Sy.No. 373/A belongs to Smt. Halamma, **west:** the remaining land in Sy No.373/B measuring 20 guntas **North:** the land of Kariyamma, **South:** Road
**2.** The land bearing Sy. No. 373/B measuring 1- acre 0-Gunta wet irrigated land situated at Kulagatte village, Honnali Taluk, out of which eastern side from Bhadra Channel measuring 20 guntas to the 2nd petitioner- Smt. Vijayamma W/o H.V. Shivaswamy bounded by: **East:** the remaining land in Sy. No.373/B measureing 20 guntas **west:** the land of Aryara Manappa, **North:** the land of Kariyamma, **south :** Road

*Given under hand my seal of this court on this day 23.09.2021*

Praveen S.R
Advocate for the Petitioner
Place : Davanagere, Date: 23.09.2021

*By the order of the Court*
chief Administrative officer
Dist & Session Judge, Davanagere

## ಮಕ್ಕಳಲ್ಲಿ ಬಂದಿರುವ ಜ್ವರಕ್ಕೂ ಕೊರೊನಾಗೂ ಸಂಬಂಧವಿಲ್ಲ

**(1ನೇ ಪುಟದಿಂದ)** ಮುಂಜಾಗ್ರತಾ ಕ್ರಮ ಕೈಗೊಳ್ಳುವುದರಿಂದ ವೈರಲ್ ಜ್ವರದಿಂದ ಪಾರಾಗಬಹುದು, ಈ ಜ್ವರಕ್ಕೆ ತುತ್ತಾದ ಎಲ್ಲಾ ಮಕ್ಕಳಿಗೂ ಔಷಧ ನೀಡಲಾಗುತ್ತಿದೆ.

ಸಂಭಾವ್ಯ ಕೋವಿಡ್ ಮೂರನೇ ಅಲೆ ತಡೆಗಟ್ಟಲು ರಾಜ್ಯದ ವಿವಿಧೆಡೆ 76 ಮಕ್ಕಳ ಆಸ್ಪತ್ರೆಗಳನ್ನು ಸಜ್ಜುಗೊಳಿಸಿದ್ದೇವೆ, ಈ ಬಗ್ಗೆ ಯಾರಿಗೂ ಆತಂಕ ಬೇಡ.

ಮೂರನೇ ಅಲೆಯಲ್ಲಿ ಮಕ್ಕಳಿಗೆ ತೊಂದರೆಯಾದರೆ ಚಿಕಿತ್ಸೆ ನೀಡಲು ಎಲ್ಲ ವ್ಯವಸ್ಥೆ ಮಾಡಲಾಗಿದೆ, ಅಗತ್ಯವಿರುವ ಉಪಕರಣಗಳನ್ನು ಖರೀದಿಸಲಾಗಿದೆ, ರಾಜ್ಯದ ಎಲ್ಲ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲೂ ಮಕ್ಕಳ ಆಸ್ಪತ್ರೆಗಳನ್ನು ಸಜ್ಜುಗೊಳಿಸಲು ಸೂಚಿಸಲಾಗಿದೆ ಎಂದು ಸುಧಾಕರ್ ಹೇಳಿದ್ದಾರೆ.

**ಸಾರ್ವಜನಿಕ ಪ್ರಕಟಣೆಗಾಗಿ**

ನನ್ನ ಕಕ್ಷಿದಾರನಾದ ಭರಮಪ್ಪ ಬಿನ್ ಲೇಟ್ ಸಿದ್ದಲಿಂಗಪ್ಪ ಬಿ.ಕಲಪನಹಳ್ಳಿ ಗ್ರಾಮದ ವಾಸಿ ದಾವಣಗೆರೆ ತಾಲ್ಲೂಕು, ಇವರು ಪಾಲು ವಿಭಾಗ ಕೋರಿ ಅಸಲು ದಾವೆ ನಂ. 355/2012 ನ್ನು ದಾವಣಗೆರೆ ಘನ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ)ದಲ್ಲಿ ದಾವೆ ಹೂಡಿದ್ದು ಸದರಿ ದಾವೆಯಲ್ಲಿ ದಾವಾ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳು ವಿವಾದಿತ ಸ್ವತ್ತುಗಳೆಂದು ಯಾರಿಗೂ ಪರಭಾರೆ ಮಾಡದಂತೆ ಘನ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ) ದಲ್ಲಿ ದಿನಾಂಕ : 12.12.2012 ರಂದು ಪರಭಾರೆ ಮಾಡದಂತೆ ಆದೇಶವನ್ನು ಮಾಡಿರುತ್ತದೆ. ಸದರಿ ಆದೇಶವನ್ನು 3ನೇ ಪ್ರತಿವಾದಿ ಬಸಪ್ಪ ಇವರು ಪ್ರಶ್ನೆ ಮಾಡಿ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ) ದಾವಣಗೆರೆ ಅಪೀಲು ಸಲ್ಲಿಸಿ ಯಾವುದೇ ಆದೇಶವಾಗಿರುವುದಿಲ್ಲ. ವಜಾವಾಗಿರುತ್ತದೆ, ನಂತರ ಹನುಮಂತಪ್ಪ ಎನ್ನುವವರು ದಾವೆಯಲ್ಲಿನ "ಬಿ" ಷೆಡ್ಯೂಲ್ ಆಸ್ತಿ 2017 ರಲ್ಲಿ ಖರೀದಿಸಿರುವುದಾಗಿ ಖಾತೆ ಬದಲಾವಣೆಗೆ ತಹಶೀಲ್ದಾರ್ ದಾವಣಗೆರೆ ಇವರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಆಧಾರವಾಗಿ ಅವರನ್ನೂ ಸಹ ಅಸಲು ದಾವೆಯಲ್ಲಿ 14ನೇ ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಸದರಿ ಅರ್ಜಿಗೆ ಈಶ್ವರಪ್ಪ 1ನೇ ಪ್ರತಿವಾದಿ ತಕರಾರು ಸಲ್ಲಿಸಿದ ಕಾರಣ ಅಪೀಲು ಸಂಖ್ಯೆ RRTC No. 132/17-18 ತಹಸೀಲ್ದಾರ್ ದಾವಣಗೆರೆ ಇವರು ಮಾನ್ಯ ಜಿಲ್ಲಾ ಕಾನೂನು ಸಲಹೆಗಾರರ ಕಾನೂನು ಸಲಹೆ ಪಡೆದು, ಅಸಲು ದಾವೆ 355/12 ಘನ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ) ದಾವಣಗೆರೆ ನ್ಯಾಯಾಲಯದಲ್ಲಿ ದಾವೆಯು ವಿಚಾರಣೆ ಹಂತದಲ್ಲಿ ಇರುವುದರಿಂದ ಮತ್ತು ದಿನಾಂಕ : 12.12.2012 ರಲ್ಲಿ ಯಾವುದೇ ಸ್ವತ್ತುಗಳು ಪರಭಾರೆ ಮಾಡದಂತೆ ಆದೇಶವಿರುವುದರಿಂದ ಯಥಾಸ್ಥಿತಿ ಕಾಪಾಡುವಂತೆ ಆದೇಶ ಮಾಡಿದ್ದು, ಸದರಿ ಆದೇಶವನ್ನು ಪ್ರಶ್ನೆ ಮಾಡಿ ಅಪೀಲು ಸಂಖ್ಯೆ 203/18-19 ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು, ಅದೇ ರೀತಿ ಹನುಮಂತಪ್ಪ ಇವರನ್ನು ದಾವೆಗೆ 14ನೇ ಪ್ರತಿವಾದಿಯನ್ನಾಗಿ ಸೇರಿಸಿದ್ದು ಅವರು 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಹಿರಿಯ ವಿಭಾಗ) ದಾವಣಗೆರೆ ಅಪೀಲು ನಂ. 30/19 ದಾಖಲಿಸಿ, ಸದರಿ ಅಪೀಲು ಸಹ ವಜಾವಾಗಿದ್ದು, ಸದರಿ ಆದೇಶದ ವಿರುದ್ಧ ಯಾವುದೇ ಅಪೀಲು ಸಲ್ಲಿಸಿರುವುದಿಲ್ಲ. ಅಪೀಲು ಸಂಖ್ಯೆ 203/18-19 ಉಪವಿಭಾಗಾಧಿಕಾರಿಗಳ ನ್ಯಾಯಾಲಯ ದಾವಣಗೆರೆ ಇವರು ಹಕ್ಕಿನ ಬಗ್ಗೆ ಪರಿಷ್ಕರಣೆ ಮಾಡುವಂತೆ ಅಧಿಕಾರವಿಲ್ಲದೇ ಇದ್ದರೂ ಘನ ಸಿವಿಲ್ ನ್ಯಾಯಾಲಯದ ಆದೇಶವನ್ನು ಲೆಕ್ಕಿಸದೆ ದಿ. : 05.08.2021 ರಂದು ವಿವಾದಿತ ಸ್ವತ್ತಿನ ಖಾತೆ ಮಾಡಲು ಆದೇಶವನ್ನು ಮಾಡಿದ್ದು, ಮಾನ್ಯ ತಹಸೀಲ್ದಾರ ದಾವಣಗೆರೆ ಇವರು ಖಾತೆ ಬದಲಾವಣೆ ಮಾಡಿರುವುದು ಕಾನೂನಿನ ಉಲ್ಲಂಘನೆಯಾಗಿರುತ್ತದೆಂದು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಿ. 30.08.21 ರಂದು ಅಪೀಲು ಸಲ್ಲಿಸಲಾಗಿದೆ ಹಾಗೂ ಘನ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ) ದಾವಣಗೆರೆ ಆದೇಶವನ್ನು ಪಾಲನೆ ಮಾಡಿರುವುದಿಲ್ಲವೆಂದು ಬಸಪ್ಪ, ಮಂಜುಳ ಹಾಗೂ ಶ್ರೀನಿವಾಸ ಇವರ ವಿರುದ್ಧ ಆದೇಶ 39 ನಿ. 2 A ಕಲಂ 151 C.P.C. ಅಡಿಯಲ್ಲಿ (Contempt Proceeding) ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ಸಹ ವಿಚಾರಣೆ ಹಂತದಲ್ಲಿ ಇರುತ್ತದೆ. ವಿವಾದಿತ ಸ್ವತ್ತಿನ ಬಗ್ಗೆ ಈಗಾಗಲೇ ಘನ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ) ದಾವಣಗೆರೆ ಪರಭಾರೆ ಮಾಡದಂತೆ ಆದೇಶವಿದ್ದರೂ ಹಕ್ಕಿನ ಬಗ್ಗೆ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ದಾವಣಗೆರೆ ಆದೇಶ ಮಾಡುವ ಪರಿಮಿತಿ ಇರದೇ ಇರುವುದರಿಂದ ಅವರ ಆದೇಶ ನನ್ನ ಕಕ್ಷಿದಾರರ ಹಕ್ಕಿಗೆ ಯಾವುದೇ ಬಾಧಕವಿರುವುದಿಲ್ಲ. ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ (ಕಿರಿಯ ವಿಭಾಗ) ದಾವಣಗೆರೆ, ಇವರ ಆದೇಶ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು, ರೆವಿನ್ಯೂ ನ್ಯಾಯಾಲಯಗಳು ಹಕ್ಕಿನ ಬಗ್ಗೆ ಆದೇಶ ಮಾಡುವ ಅಧಿಕಾರವಿರುವುದಿಲ್ಲವೆಂದು ಆದೇಶಗಳಿದ್ದರೂ ಸಹ, ಸದರಿ ಆದೇಶಗಳ ಉಲ್ಲಂಘನೆ ಬಗ್ಗೆ ಸೂಕ್ತ ಕಾನೂನಿನ ಕ್ರಮ ಜರುಗಿಸಲು ಅರ್ಜಿಯನ್ನು ದಾಖಲಿಸಲಾಗುವುದು ಹಾಗೂ 14ನೇ ಪ್ರತಿವಾದಿ ಹನುಮಂತಪ್ಪ ಇವರು ತರಾತುರಿಯಲ್ಲಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಹೊರಟಿದ್ದು, ಆ ಕಾರಣಕ್ಕಾಗಿ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದು, ಯಾರೇ ಆಗಲಿ ವಿವಾದಿತ ಸ್ವತ್ತಿನ ಬಗ್ಗೆ ಯಾರೇ ಆಗಲಿ ವ್ಯವಹರಿಸಿದ್ದಲ್ಲಿ ಸದರಿ ವ್ಯವಹಾರದಿಂದ ಉಂಟಾಗುವ ಕಷ್ಟ ನಷ್ಟಗಳಿಗೆ ಅವರೇ ಹೊಣೆಗಾರರೇ ವಿನಃ ನನ್ನ ಕಕ್ಷಿದಾರರಾಗಲೀ ಇತರೆ ವಾರಸುದಾರರುಗಳಾಗಲೀ ಜವಾಬ್ದಾರರಲ್ಲವೆಂದು ಈ ಮೂಲಕ ಸಾರ್ವಜನಿಕವಾಗಿ ಪ್ರಕಟಣೆ ನೀಡಲಾಗಿದೆ. **ಷೆಡ್ಯೂಲ್ : (ಬಿ) ದಾವಣಗೆರೆ ತಾಲ್ಲೂಕು ಬೇತೂರು ಗ್ರಾಮದ ಸರ್ವೇ ನಂ. 191/5 ಅದರ ವಿಸ್ತೀರ್ಣ ಎಕರೆ 2 ಗುಂಟೆ 38 ಇದಕ್ಕೆ ಚಕ್ಕುಬಂದಿ, ಪೂರ್ವಕ್ಕೆ ಚಂದ್ರಶೇಖರಪ್ಪನವರ ಆಸ್ತಿ, ಪಶ್ಚಿಮಕ್ಕೆ ಬಸಪ್ಪನವರ ಆಸ್ತಿ, ಉತ್ತರಕ್ಕೆ ಚಂದ್ರಮ್ಮನವರ ಆಸ್ತಿ, ದಕ್ಷಿಣಕ್ಕೆ ಹನುಮಂತಪ್ಪನವರ ಆಸ್ತಿ. ಈ ಮಧ್ಯದ ಸ್ವತ್ತು.**

ಸಹಿ/- ವಾದಿಯರ ಸಹಿ
ಭರಮಪ್ಪ ಬಿನ್ ಲೇಟ್ ಸಿದ್ದಲಿಂಗಪ್ಪ
ಬಿ. ಕಲಪನಹಳ್ಳಿ

ಸಹಿ/- ಯು.ಜಿ. ಪಾಟೀಲ್, ಬಿಕಾಂ. ಎಲ್.ಎಲ್.ಬಿ.
318/30-31, ದೇವರಾಜ್ ಅರಸ್ ಬಡಾವಣೆ,
'ಎ' ಬ್ಲಾಕ್, ದಾವಣಗೆರೆ. 94483 18853

# ನಗರ ಮತ್ತು ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಸಿ.ಸಿ. ಬಿ. ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಎಸ್.ಎಸ್. ಲೇಔಟ್ ಎ ಮತ್ತು ಬಿ ಬ್ಲಾಕ್, ಎಂ.ಸಿ.ಸಿ. ಬಿ. ಬ್ಲಾಕ್, ಕುವೆಂಪು ನಗರ, ನಿಜಲಿಂಗಪ್ಪ ಬಡಾವಣೆ. ಮೌನೇಶ್ವರ ಬಡಾವಣೆ, ನಿಟ್ಟುವಳ್ಳಿ, ಲೆನಿನ್ ನಗರ, ಸರಸ್ವತಿ ನಗರ, ಶಕ್ತಿ ನಗರ, ಡಿ.ಸಿ.ಎಂ. ಟೌನ್‌ಶಿಪ್, ಕೊಟ್ಟೂರೇಶ್ವರ ಬಡಾವಣೆ, ಕೆ.ಎಸ್.ಆರ್.ಟಿ.ಸಿ., ಭಗತ್‌ಸಿಂಗ್ ನಗರ, ಈರುಳ್ಳಿ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಕೆ.ಟಿ.ಜೆ. ನಗರ, ಕೆ.ಬಿ. ಬಡಾವಣೆ, ಪಿ.ಜೆ. ಬಡಾವಣೆ, ಈದ್ಗಾ ಕಾಂಪ್ಲೆಕ್ಸ್, ವಿನೋಬನಗರ, ಎಸ್.ಎಸ್. ಬಿ. ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ನಗರ, ರೆಹಮಾನ್ ರಸ್ತೆ, ಕೊರಚರ ಹಟ್ಟಿ, ದೇವರಾಜ್ ಕ್ವಾರ್ಟರ್ಸ್, ಇಂದಿರಾ ನಗರ, ಕಾರ್ಲ್‌ಮಾರ್ಕ್ಸ್ ನಗರ, ಸಿದ್ದರಾಮೇಶ್ವರ ಬಡಾವಣೆ, ಮಂಡಕ್ಕಿ ಭಟ್ಟಿ, ಶಿವಪಾರ್ವತಿ ನಗರ, ಮಂಡಿಪೇಟೆ, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಎನ್.ಆರ್. ರಸ್ತೆ, ಇಸ್ಲಾಂ ಪೇಟೆ, ಬೆಳ್ಳೂಡಿ ಗಲ್ಲಿ, ಬಿ.ಟಿ. ಗಲ್ಲಿ, ವಿಜಯಲಕ್ಷ್ಮಿ ರಸ್ತೆ, ಎಂ.ಜಿ. ರಸ್ತೆ, ಗೂಡ್‌ಶೆಡ್ ರಸ್ತೆ, ಆಜಾದ್‌ನಗರ, ಅಕ್ಕಾ ಮಸೀದಿ, ಹೆಗಡೆ ನಗರ, ಮಾಗಾನಹಳ್ಳಿ ರಸ್ತೆ, ಹಮ್‌ಜಾನ್ ಬಾಬಾಜಾನ್ ದರ್ಗಾ, ಜೋಗಲ್ ಬಾಬಾ ಲೇಔಟ್. ದುರ್ಗಾಂಬಿಕ ಬಡಾವಣೆ, ಹೊಸ ಮತ್ತು ಹಳೆ ಚಿಕ್ಕನಹಳ್ಳಿ ಬಡಾವಣೆ, ಎಂ.ಸಿ.ಸಿ. ಬಿ. ಬ್ಲಾಕ್, ದೇವರಾಜ್ ಅರಸ್ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಮಹಾನಗರ ಪಾಲಿಕೆ, ಎಂ.ಬಿ.ಕೇರಿ, ಚಲುವಾದಿ ಕೇರಿ, ಹೊಂಡದ ವೃತ್ತ, ಜಾಲಿ ನಗರ, ದುರ್ಗಾಂಬಿಕ ದೇವಸ್ಥಾನದ ಹತ್ತಿರ, ಇ.ಡಬ್ಲ್ಯೂ.ಎಸ್. ಕಾಲೋನಿ, ಗಣೇಶ್‌ರಾವ್ ವೃತ್ತ, ಇ.ಎಸ್.ಐ. ಆಸ್ಪತ್ರೆ ಸುತ್ತಮುತ್ತ ಪ್ರದೇಶಗಳು.

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಛೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ. ಎಸ್. ನಗರ.ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ ಹೆಚ್.ಕೆ.ಆರ್. ನಗರ, ಕಬ್ಬೂರು, ಬಸಾಪುರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಛೇರಿ, ಜಿ.ಎಂ.ಐ.ಟಿ. ಬಸವೇಶ್ವರ ನಗರ, ರಶ್ಮಿ ಹರಿಹರ ರಸ್ತೆ, ವಿಜಯ ನಗರ, ಅಶೋಕ ನಗರ, ಆರ್.ಟಿ.ಓ. ಕಛೇರಿ, ಎಸ್.ಪಿ. ಕಛೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ, ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ಆವರಗೊಳ್ಳ, ನೀಲಾನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೆಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಹನುಮನಹಳ್ಳಿ, ಕೊಗ್ಗನೂರು, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಆರಾಧ್ಯ ಕೈಗಾರಿಕೆ.

ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೇನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ರೆಡ್ಡಿ ಕ್ಯಾಂಪ್, ಪುಟಗಾನಾಳು, ಶ್ರೀರಾಮನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸದಾಶಿವ ಆಯೋಗದ ವರದಿ: ದಸಂಸ ಮುಖಂಡರ ಸಭೆ



**ಮಲೇಬೆನ್ನೂರು**

ಮಲೇಬೆನ್ನೂರು, ಸೆ.23- ನ್ಯಾ. ಎ.ಜೆ. ಸದಾಶಿವ ಆಯೋಗದ ವರದಿಯನ್ನು ಯಥಾವತ್ ಜಾರಿಗೊಳಿಸಲು ಹಾಗೂ ವೀರಶೈವ ಪಂಗಡ ಮತ್ತು ಬೇಡ ಜಂಗಮ ಎಂಬ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯುವವರ ವಿರುದ್ಧ ಪ್ರತಿಭಟಿಸುವ ಕುರಿತು ಪೂರ್ವಭಾವಿ ಸಭೆಯನ್ನು ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಹೋಬಳಿಯ ಹರಳಹಳ್ಳಿ, ಭಾನುವಳ್ಳಿ, ಕುಂಬಳೂರು ಹಾಗೂ ಇತರೆ ಗ್ರಾಮಗಳ ದಲಿತ ಮುಖಂಡರಾದ ಭಾನುವಳ್ಳಿ, ಸಿ. ಚೌಡಪ್ಪ, ಗ್ರಾ.ಪಂ. ಸದಸ್ಯರುಗಳಾದ ಎಚ್.ಎಂ. ಹನುಮಂತಪ್ಪ, ಮಂಜಪ್ಪ, ಸಮಾಜದ ಹಿರಿಯರು ಮತ್ತು ಯುವಕರಲ್ಲಿ ಸದಾಶಿವ ವರದಿ ಕುರಿತು ಜಾಗೃತಿ, ಸಂಘಟನೆ, ಮಲೇಬೆನ್ನೂರು ಹೋಬಳಿ ಸಂಚಾಲಕರ ನೇಮಕ ಸೇರಿದಂತೆ ವಿವಿಧ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು.

ತಾಲ್ಲೂಕು ಸಂಚಾಲಕ ಪಿ.ಜೆ. ಮಹಂತೇಶ್ ಮಾತನಾಡಿ, ಜಮೀನಿನಲ್ಲಿ ಕೃಷಿ ಕಾರ್ಯ ನಡೆದಿರುವುದರಿಂದ, ಮಾಹಿತಿ ಕೊರತೆ ಕಾರಣ ಕೆಲವರು ಗೈರಾಗಿದ್ದಾರೆ. ಸೆ. 23ಕ್ಕೆ ಹರಿಹರದ ಕೃಷ್ಣಪ್ಪ ಭವನದಲ್ಲಿ ಮತ್ತೆ ಎರಡನೇ ಹಂತದಲ್ಲಿ ಸಭೆ ನಡೆಸುತ್ತೇವೆ. ಆ ಸಭೆಯಲ್ಲಿ ಒಳ ಮೀಸಲಾತಿ ಜಾರಿ ಮತ್ತು ಉಳ್ಳವರು ಪ.ಜಾ. ಪ್ರಮಾಣ ಪತ್ರ ಪಡೆಯುವ ಬಗ್ಗೆ ಪ್ರತಿಭಟನೆ ತೀವ್ರಗೊಳಿಸುವ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದರು.

ಪಾಳ್ಯ ಎ.ಕೆ. ಸೋಮು, ಯುವರಾಜ್, ರಾಕೇಶ್, ಜಿಗಳಿಯ ಶಶಿ, ರಾಕೇಶ್, ಮಂಜು, ಬಸವರಾಜ್, ಜಯಪ್ಪ, ನಂದಿಗಾವಿ ಎ.ಕೆ. ಸಂತೋಷ್, ನಿಂಗಪ್ಪ ಇನ್ನಿತರರು ಭಾಗವಹಿಸಿದ್ದರು.

## ಸಿಜಿ, ಇಎಸ್‌ಐ ಆಸ್ಪತ್ರೆಗಳ ಆಕ್ಸಿಜನ್ ಪ್ಲಾಂಟ್‌ಗಳನ್ನು ವೀಕ್ಷಿಸಿದ ಡಿಸಿ, ಸಿಇಓ



ದಾವಣಗೆರೆ, ಸೆ.23- ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಜಿ.ಪಂ. ಸಿಇಓ ವಿಜಯ್ ಮಹಾಂತೇಶ್ ದಾನಮ್ಮನವರ್ ಅವರುಗಳು ನಗರದ ಸಿ.ಜಿ.ಆಸ್ಪತ್ರೆ ಹಾಗೂ ಇ.ಎಸ್.ಐ ಆಸ್ಪತ್ರೆಗೆ ಭೇಟಿ ನೀಡಿ, ಸಿಜಿ ಆಸ್ಪತ್ರೆಯ ವಾರ್ಡ್ 65 ಮತ್ತು 66 ರ ಮಕ್ಕಳ ವಾರ್ಡ್ ಸಿದ್ಧತೆ ಹಾಗೂ 1 ಮತ್ತು 2 ಸಾವಿರ ಲೀ. ಆಕ್ಸಿಜನ್ ಪ್ಲಾಂಟ್ ಹಾಗೂ ಇಎಸ್‌ಐ ಆಸ್ಪತ್ರೆಯ 1 ಸಾವಿರ ಲೀ ಆಕ್ಸಿಜನ್ ಪ್ಲಾಂಟ್ ಕಾಮಗಾರಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಡಿ.ಹೆಚ್.ಓ.ನಾಗರಾಜ್ ಹಾಗೂ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಹರಿಹರದಲ್ಲಿ ವಿಶ್ವಕರ್ಮ ಮಹೋತ್ಸವ



ಹರಿಹರ, ಸೆ.23- ಶ್ರೀ ಗುರು ಮೌನೇಶ್ವರ ದೇವಸ್ಥಾನದಲ್ಲಿ ಸರಳವಾಗಿ ಶ್ರೀ ವಿಶ್ವಕರ್ಮ ಮಹೋತ್ಸವವನ್ನು ಆಚರಿಸಲಾಯಿತು. ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ರುದ್ರಾಚಾರ್, ಲಕ್ಷ್ಮಿ ರಾಜಾಚಾರ್, ನಾಗರಾಜಚಾರ್, ಶಿಲ್ಪಿ ಉಮಾಚಾರ್ ಐರಣಿ, ಎಂ.ಆರ್. ಬಡಿಗೇರ್, ಜನಾರ್ದನಚಾರ್, ನೇತ್ರಾವತಿ ಪ್ಯಾಟಿ, ಗೋಪಾಲಚಾರ್, ಅನಿಲ್ ಪ್ಯಾಟಿ, ಮಹೇಶ್ ಆಚಾರ್, ಮೌನೇಶಚಾರ್ ಇಟಗಿ ಇನ್ನಿತರರು ಭಾಗವಹಿಸಿದ್ದರು. ಶ್ರೀ ಕಾಳಿಕಾಂಬ ಹಾಗೂ ಶ್ರೀ ಗುರು ಮೌನೇಶ್ವರ ಸೇವಾ ಸಮಿತಿಯವರು ಹಾಜರಿದ್ದರು.

## ನಿವೃತ್ತ ಚಿತ್ರಕಲಾ ಶಿಕ್ಷಕರುಗಳಿಗೆ ಸನ್ಮಾನ




ದಾವಣಗೆರೆ, ಸೆ.23- ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ವತಿಯಿಂದ ಜಿಲ್ಲೆಯಲ್ಲಿನ ನಿವೃತ್ತ ಚಿತ್ರಕಲಾ ಶಿಕ್ಷಕರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ. ಪರಮೇಶ್ವರಪ್ಪ ಕಾರ್ಯಕ್ರಮ ಉದ್ಘಾಟಿಸಿದರು. 2021ನೇ ಸಾಲಿನಲ್ಲಿ ನಿವೃತ್ತರಾದ ಎಂ.ಎಸ್. ಅಗಡಿ, ಬಿ. ಮಾನಪ್ಪ, ವಸಂತ ಎನ್. ರಾಟೆ ಇವರನ್ನು ಸನ್ಮಾನಿಸಲಾಯಿತು.

ಡಯಟ್ ಉಪನಿರ್ದೇಶಕ ಹೆಚ್.ಕೆ. ಲಿಂಗರಾಜು ಅಧ್ಯಕ್ಷತೆ ವಹಿಸಿದ್ದರು. ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ, ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಜಿ. ಆವಟಿ ಮತ್ತು ಇತರರು ಭಾಗವಹಿಸಿದ್ದರು.

## ರಾಷ್ಟ್ರಮಟ್ಟಕ್ಕೆ ಜಿಲ್ಲಾ ನೆಟ್ ಬಾಲ್ ಅಸೋಸಿಯೇಷನ್ ಕ್ರೀಡಾಪಟುಗಳು



ದಾವಣಗೆರೆ, ಸೆ. 23- ಆಂಧ್ರಪ್ರದೇಶದ ನೆಲ್ಲೂರು ಪಟ್ಟಣದಲ್ಲಿ ನೆಟ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ ಇವರ ಆಶ್ರಯದಲ್ಲಿ ನಡೆಯು ತ್ತಿರುವ 26ನೇ ಸಬ್ ಜ್ಯೂನಿಯರ್ ನ್ಯಾಷನಲ್ ನೆಟ್ ಬಾಲ್ ಚಾಂಪಿ ಯನ್‌ಶಿಪ್ ಪಂದ್ಯಾವಳಿಯಲ್ಲಿ ನಗರದ ನೆಟ್ ಬಾಲ್ ಅಸೋಸಿಯೇಷನ್‌ನ ಮೂವರು ಕ್ರೀಡಾಪಟುಗಳು ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

17 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ನಾಯಕನಾದ ವಿಷ್ಣು ಎನ್.ಎಂ., ಬಾಲಕಿಯರ ವಿಭಾಗದಲ್ಲಿ ಸೃಷ್ಟಿ ಕೆ. ಬೆಳ್ಳೂಡಿ ಮತ್ತು ಮನ್ವಿತಾ ಎಸ್. ಮಸ್ತಿ ಇವರು ಅಮೆಚೂರ್ ನೆಟ್ ಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕ ಇವರ ವತಿಯಿಂದ ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳನ್ನು ತರಬೇತುದಾರ ಆರ್. ವೀರೇಶ್, ಆರ್. ದರ್ಶನ್ ಅಭಿನಂದಿಸಿದ್ದಾರೆ.

## ಚನ್ನಗಿರಿ : ಕೃಷಿ ಸಿಂಚಾಯಿ ಯೋಜನೆಗೆ ರೈತರಿಂದ ಅರ್ಜಿ

ಚನ್ನಗಿರಿ, ಸೆ.23-ತೋಟಗಾರಿಕೆ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತಿ ಸಣ್ಣ ಹಾಗೂ ಇತರೆ ವರ್ಗದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗಾಗಿ ಆಯಾ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಹಾಗೂ ಚನ್ನಗಿರಿ ತೋಟಗಾರಿಕೆ ಇಲಾಖೆ ಕಚೇರಿ ಸಂಪರ್ಕಿಸಬಹುದು ಎಂದು ಚನ್ನಗಿರಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

# ಕಣ್ಣುಗಳ ಆರೈಕೆ ಅತ್ಯವಶ್ಯಕ



**ಹರಪನಹಳ್ಳಿ ಪಿಎಸ್‌ಐ ಪ್ರಕಾಶ್**

ಹರಪನಹಳ್ಳಿ, ಸೆ.23- ಪಂಚೇಂದ್ರಿಯಗಳಲ್ಲಿ ಕಣ್ಣುಗಳು ಅತ್ಯಂತ ಸೂಕ್ಷ್ಮ ಅಂಗವಾಗಿದ್ದು, ಅವುಗಳ ಆರೈಕೆ ಅತ್ಯವಶ್ಯಕ ಎಂದು ಹರಪನಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಸಿ. ಪ್ರಕಾಶ್ ಹೇಳಿದರು.

ಪಟ್ಟಣದ ಪೊಲೀಸ್ ವಸತಿ ಗೃಹದ ಆವರಣದಲ್ಲಿ ಕಠಾರೆ ಐ ಆಪ್ಟಿಕಲ್ಸ್ ವತಿಯಿಂದ ಪೊಲೀಸ್ ಸಿಬ್ಬಂದಿಗಳಿಗೆ, ಪತ್ರಿಕಾ ಮಾಧ್ಯಮ ಮಿತ್ರರಿಗೆ ಹಾಗೂ ಮತ್ತವರ ಕುಟುಂಬ ವರ್ಗದವರಿಗೆ ಏರ್ಪಡಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ದೃಷ್ಟಿ ಹೀನತೆ ಎಲ್ಲಾ ವಯೋಮಾನದವರಲ್ಲಿ ಕಾಣುತ್ತಿದ್ದು, ಕಣ್ಣುಗಳ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಬೇಕು. ಕಣ್ಣುಗಳಿಗೆ ಪುಷ್ಟಿ ನೀಡುವ ಹಣ್ಣು, ತರಕಾರಿಗಳನ್ನು ಸೇವಿಸಬೇಕು. ಕಂಪ್ಯೂಟರ್, ಟಿವಿ ಹಾಗೂ ಮೊಬೈಲ್‌ಗಳನ್ನು ಹೆಚ್ಚು ಉಪಯೋಗಿಸುವುದರಿಂದ ಕಣ್ಣಿನ ಸಮಸ್ಯೆ ಕಾಡುತ್ತದೆ. ಅವಶ್ಯಕತೆ ಇದ್ದಲ್ಲಿ ಮಾತ್ರ ಬಳಸಿ ಎಂದರು.

ಕಠಾರೆ ಐ ಆಪ್ಟಿಕಲ್ಸ್‌ನ ಮೋಹನ್ ಮಾತನಾಡಿದರು. ಕಠಾರೆ ಐ ಆಪ್ಟಿಕಲ್ಸ್ ಕಂಪನಿಯ ವಿಶ್ವನಾಥ್, ಮನೋಹರ್, ಭರತ್, ಕಿರಣ್ ಸೇರಿದಂತೆ ಎಎಸ್‌ಐಗಳಾದ ಸದ್ಯೋಜಾತಪ್ಪ. ಹೂಗಾರ್, ರುದ್ರಪ್ಪ, ಪೇದೆಗಳಾದ ಕೂಲಹಳ್ಳಿ ಕೊಟ್ರೇಶ್, ಮಾದಾಪುರ ಬಿ. ನಿಂಗಪ್ಪ, ಚಂದ್ರು, ಕೆ.ವಿಷ್ಣುವರ್ಧನ್, ಜಿ. ಕೊಟ್ರೇಶ್, ಮಾಲತೇಶ್, ಸಿದ್ದಲಿಂಗಮ್ಮ, ಶೋಭ, ವೀಣಾ ಮತ್ತಿತರರು ಹಾಜರಿದ್ದರು.

## ನಗರದಲ್ಲಿ ಇಂದು ಅಂಗನವಾಡಿ ಕಾರ್ಯಕರ್ತೆಯರಿಂದ ಪ್ರತಿಭಟನೆ

ದಾವಣಗೆರೆ, ಸೆ.23- ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಾಳೆ ದಿನಾಂಕ 24 ರಂದು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಫೆಡರೇಷನ್ ನಡೆಸುತ್ತಿರುವ ಅಖಿಲ ಭಾರತ ಮುಷ್ಕರದ ಅಂಗವಾಗಿ ನಗರದಲ್ಲೂ ಮುಷ್ಕರ ನಡೆಸಲಾಗುವುದು ಎಂದು ಎಐಟಿಯುಸಿಯ ಜಿಲ್ಲಾಧ್ಯಕ್ಷ ಎಂ.ಬಿ. ಶಾರದಮ್ಮ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 11.30ಕ್ಕೆ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ನಂತರ ಉಪ ವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸುವುದಾಗಿ ಹೇಳಿದರು.ಪತ್ರಿಕಾಗೋಷ್ಠಿಯಲ್ಲಿ ಎಸ್.ಎಸ್. ಮಲ್ಲಮ್ಮ, ವಿಶಾಲಾಕ್ಷಿ, ರೇಣುಕಮ್ಮ, ಸುಧಾ, ಕಾಳಮ್ಮ ಆವರಗೆರೆ ಚಂದ್ರು, ಆವರಗೆರೆ ವಾಸು ಇತರರು ಉಪಸ್ಥಿತರಿದ್ದರು.


**TO-LET**
First Floor for Commercial/office Puropse, 25x45=1125sqft with attched Toilets, 3rd main, P.J.Extension, Near Chetana Hotel, Davanagere.
94484 81238, 63618 16497

**HOUSING / CAR LOAN**
ಎಲ್ಲಾ ದಾಖಲೆಗಳನ್ನು ಮತ್ತು ಅರ್ಜಿಯನ್ನು ನಾವೇ ರೆಡಿಮಾಡಿ ಸೈಟ್ ಕೊಳ್ಳಲು, ಮನೆ ಕಟ್ಟಲು, ಮನೆ ಖರೀದಿಸಲು ಮತ್ತು ಕಾರು ಖರೀದಿಸಲು ಸಾಲ ಮಾಡಿಸಿಕೊಡಲಾಗುವುದು.
Canara Bank, Indian Bank & HDFC Bank - DSA, Contact: 9611866449, 8073345822

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ ($^1/_2$%) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409
ದಾವಣಗೆರೆ.

**ಬೇಕಾಗಿದ್ದಾರೆ**
Diploma in Hardware Networking / Software ಅನುಭವವುಳ್ಳಂತಹ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.
ಸ್ಥಳ: ಎ.ಕೆ. ಫಾರ್ಮಾ ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

**ಜಮೀನು ಕೊಳ್ಳಲು / ಮಾರಲು**
ಹರಿಹರ-ದಾವಣಗೆರೆ (ಸಂಪರ್ಕಿಸಿ)
74112 50447

**ಹುಡುಗರು ಬೇಕಾಗಿದ್ದಾರೆ**
Sri Ram Pharmaceutical & Surgicals ನಲ್ಲಿ Delivery & Office Boy ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ ಬೇಕಿಲ್ಲ.
97388 80180

**ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಎ' ಬ್ಲಾಕ್, ಕೆನರಾ ಬ್ಯಾಂಕ್ ಪಕ್ಕ, ರಾಮಕೃಷ್ಣ ಆಶ್ರಮದ ಎದುರು ಇರುವ ಖಾಲಿ ಜಾಗ 60x100 ನೆಲ ಬಾಡಿಗೆಗೆ ಇದೆ ಅಥವಾ Temporary Structure ನಿರ್ಮಿಸಿ ಕೊಡಲಾಗುವುದು.
97311 10799

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ವಿದ್ಯಾನಗರ ದಾಟಿ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x50 East, 30x40 West, 40x60 East, 60x40 West, 40ಅಡಿ ರೋಡಿಗಿದೆ., 30x50, 30x50 West ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ, ಮೂರು ಬೆಡ್ ರೂಂ ಮನೆ, ವಿದ್ಯಾನಗರ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆಯಲ್ಲಿ.
ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 40x65 ಉತ್ತರ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, 30x50 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**WANTED (LADY TEACHERS)**
B.A B.Ed- English major -1
B.Sc B.Ed PCMB -1 D.Ed -1
NTC-1 English Fluency must.
JNANABHARATHI VIDYALAYA
Ring Road, Opp: New shakthi Gas office, Nittuvalli, Davangere.
Office Time:- 10 AM to 1 PM
91644 91132, 90087 35218

**REQUIRED**
GENTS AND LADIES WARDEN FOR HOSTEL
Location : DAVANGERE
CONTACT : 78999 17593

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 East, 40x60 East, 30x50 East, 30x50 West, 30x40 East, 30x40 South ಸೈಟ್‌ಗಳು ಇದ್ದರೆ ಮಾರಿಸಿಕೊಡುತ್ತೇವೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ತೂಕದ ಲೆಕ್ಕದಲ್ಲಿ ಅಗರಬತ್ತಿ ಮಾರಾಟ**
ಸೆಂಟ್ ಅಗರಬತ್ತಿ 1 Kg-ರೂ. 80/-
ಲೂಸ್ ಅಗರಬತ್ತಿ 2Kg-ರೂ.150/-
ಹೈಸ್ಕೂಲ್ ಮೈದಾನ, ಪ್ರೈವೇಟ್ ಬಸ್‌ಸ್ಟ್ಯಾಂಡ್, Shop No. 5
ಫೋ : 89517 16682

**ಮಾರಾಟಕ್ಕಿದೆ**
ಭವಾನಿ ರಾಗಿ ಕ್ಲೀನಿಂಗ್ ಮಿಷನ್ ಮಾರಾಟಕ್ಕಿದೆ
(1 ಗಂಟೆಗೆ 500 kg)
98449 37527

**ಸೈಟ್ ಗಳು ಮಾರಾಟಕ್ಕಿವೆ**
ಕುಂದುವಾಡ ಕೆರೆ ಮತ್ತು ಯರಗುಂಟೆ ಬಳಿ 20x30 30x40 ಅಳತೆಯ ಸೈಟ್ ಗಳು ಮಾರಾಟಕ್ಕಿವೆ.
84960 49090

**REQUIRED**
Male candidate for financial sector, experience in selling loans, Swiping Machines preffered. Only Graduates.
Sri Vatsa Enterprises
PJ Extension, 4th Main, opp Swad Hypermart Davangere.
99010 10214

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಹಗಲು ಪಾಳೆಯಕ್ಕೆ ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳಾ ಸ್ವೀಪರ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯ ಇರುತ್ತದೆ.
63639 54459

**ಸೈಟುಗಳು ಮಾರಾಟಕ್ಕಿವೆ**
ಕುಂದವಾಡ ಕೆರೆ ಮತ್ತು ಯರಗುಂಟೆ ಬಳಿ 20×30, 30×40 ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ
84960 49090

**ಬೇಕಾಗಿದ್ದಾರೆ**
KAKE Walk ಕೌಂಟರ್ ಸರ್ವೀಸ್, ಕ್ಲೀನರ್, ಲೇಡಿಸ್ ಕ್ಲೀನರ್, ಸ್ಟೋರ್ ಕ್ಲೀನರ್
8792187661

**ಮನೆ ಬಾಡಿಗೆಗೆ ಇದೆ**
#2285/30, B/1, LIC ಕ್ವಾಟ್ರರ್ಸ್ ವಿದ್ಯಾನಗರ ಪಾರ್ಕ್ ಹತ್ತಿರ, ವಿದ್ಯಾನಗರದಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ 2BHK ಮನೆ ಹಾಗೂ ಸಿಂಗಲ್ ರೂಂ ಬಾಡಿಗೆಗೆ ಇದೆ.
94480 47581
(ಸಸ್ಯಹಾರಿಗಳಿಗೆ, ನೌಕರರಿಗೆ ಮಾತ್ರ ಮಾತ್ರ)

**ವಾಹನ ಮಾರಾಟಕ್ಕಿದೆ**
ಉತ್ತಮ ಸ್ಥಿತಿಯಲ್ಲಿರುವ 2012ನೇ Model, Force Kargo king goods ವಾಹನ (Yellow Board) ಮಾರಾಟಕ್ಕಿದೆ. ಬೆಲೆ 3,60,000/- ಆಸಕ್ತರು ಸಂಪರ್ಕಿಸಿ:
KBR Industries
109/70, TC Layout, RMC Link Road, Davanagere
PH: 63621 47549

**ಜಮೀನು ಮಾರಾಟಕ್ಕಿದೆ**
ತೋಳಹುಣಸೆ ಗ್ರಾಮದಲ್ಲಿ ರೇಷ್ಮೆ ಇಲಾಖೆಗೆ ಹೋಗುವ ದಾರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
87674 87922

**ಮನೆ ಲೀಸ್‌ಗೆ ಇದೆ**
ಡಬಲ್ ರೂಂ, ಅಟ್ಯಾಚ್ ಬಾತ್‌ರೂಂ ಇರುವ ಮನೆ ಲೀಸ್‌ಗೆ ಇದೆ. ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, 4ನೇ ಮೇನ್, ಸಪ್ತಗಿರಿ ಸ್ಕೂಲ್ ಹತ್ತಿರ, ದಾವಣಗೆರೆ.
97425 37448
80730 07234

**ನೆಲ ಬಾಡಿಗೆಗೆ ಇದೆ**
ವಾಣಿಜ್ಯ ಉದ್ದೇಶಗಳಿಗೆ ಜಾಗ ಖಾಲಿ ಇದೆ. ದಾವಣಗೆರೆ, ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 6577 ಅಡಿ (ಅಗಲ 28, ಉದ್ದ 233)
87109 64433

**ಬಾಡಿಗೆಗೆ ಇದೆ**
ವಾಣಿಜ್ಯ ಮಳಿಗೆಗಳು ಮೋತಿ ನಗರ ಬಾಡಾ ಕ್ರಾಸ್ ಹತ್ತಿರ 35×35 ಹಾಗೂ ಅಪೂರ್ವ ರೆಸಾರ್ಟ್ ಹತ್ತಿರ 50×32 ಅಳತೆಯ ಮಳಿಗೆಗಳು ಬಾಡಿಗೆಗಿವೆ.
ಸಂಪರ್ಕಿಸಿ
97384 17534

**ತಕ್ಷಣ ಬೇಕಾಗಿದ್ದಾರೆ**
IMPULSE Opportunity ಯಲ್ಲಿ 10th, PUC, ITI, Diploma & Any Degree ಆದ Age (18-24) Earn (7, 500 -15000) PM, Photo, Resume & Adhar ಜೆರಾಕ್ಸ್‌ನೊಂದಿಗೆ
ಸಂಪರ್ಕಿಸಿ:
81056 00262

**ಹುಡುಗರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
7975937805

**ಜಾಗ ಮಾರಾಟಕ್ಕಿದೆ**
ಹೊಂಡದ ಸರ್ಕಲ್ ಹತ್ತಿರ 22×40 ಕಮರ್ಷಿಯಲ್ ಜಾಗ ಮಾರಾಟಕ್ಕಿದೆ.
93807 13883

**ಬೇಕಾಗಿದ್ದಾರೆ**
Asst Mechanic: ITI Dieselmech/ Fitter, Service Advisor : Diploma in Automobile/ mec Exp: 2-3 years in Automobile workshop
ಸಂಪರ್ಕಿಸಿ: ವಿಜಯ ಆಟೋ ಸೇಲ್ಸ್ ಅಂಡ್ ಸರ್ವೀಸ್, ಪಿ.ಬಿ.ರೋಡ್, ದಾವಣಗೆರೆ.
94480 70098

**ಬೇಕಾಗಿದ್ದಾರೆ**
ಪಿಯುಸಿ ಪಾಸಾದ 25 ವರ್ಷದೊಳಗಿನ ಯುವಕರು ಸಹಾಯಕರಾಗಿ ಬೇಕಾಗಿದ್ದಾರೆ. ತರಬೇತಿ ಸಹಿತ ಆಕರ್ಷಕ ಸಂಬಳ.
ಆಸಕ್ತರು ಸಂಪರ್ಕಿಸಿ :
ನ್ಯೂರೋಥೆರಪಿ ವೆಲ್‌ನೆಸ್ ಸೆಂಟರ್
3ನೇ ಮೇನ್, 2ನೇ ಕ್ರಾಸ್, MCC B ಬ್ಲಾಕ್ ಸುರಭಿ ಆಸ್ಪತ್ರೆ ಹತ್ತಿರ, ದಾವಣಗೆರೆ.
99726 00713

**FOR SALE**
Commercial property for sale
infront of aralimara bus stop 15x35 ground and 2bhk at 1st floor
92417 50559

**ಖಾಲಿ ಜಾಗ ಬಾಡಿಗೆಗೆ ಇದೆ**
ಜಗಳೂರು ರಸ್ತೆಯ ಎಲೆಬೇತೂರಿನಲ್ಲಿ ಡಾಬಾ ಹಾಗೂ ಹೋಟೆಲ್‌ಗಳಿಗೆ ಖಾಲಿ ಜಾಗ ಬಾಡಿಗೆಗೆ ಇದೆ.
ಸೈಟುಗಳಿಗೆ ಸಂಪರ್ಕಿಸಿ
98440 67940

**ಹೊಸ ಮನೆ ಬಾಡಿಗೆ ಬೇಕಾಗಿದೆ**
1BHK/ 2BHK ಮನೆ ಬಾಡಿಗೆ ಬೇಕಾಗಿದೆ. Well Furnished/ Semi furnished & New Davangere.
97391 55336

**JOBS**
MCS ACADEMY
Training & Placement Cell
98444 92888

**Wanted Immediately**
Experienced Assistant Proffessor in Education M.A., M.Ed., M. Phil, KSET or NET Qualified in subject methodology Kannad and history for M.E.S. college of Education. Walk-in-Interview from 24.09.2021 to 30.09.2021 with all academic testimonials.
Contact : M.E.S. College of Education
9th cross, Anjaneya Extension, Davangere-04. 98804 36414

**ಬೇಕಾಗಿದ್ದಾರೆ**
ಉದ್ಯೋಗ ಮತ್ತು ವ್ಯಾಪಾರ ಅವಕಾಶ. ಆಸಕ್ತ ಮಹಿಳೆಯರು (Only for Ladies) ಸಂಪರ್ಕಿಸಿ.
(ದಿನನಿತ್ಯದ ಖರ್ಚಿನಿಂದ ಆದಾಯ)
91086 20491

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಪೇಪರ್ ಕಪ್ ಮಷಿನ್ ಮಾರಾಟಕ್ಕಿವೆ**
ಉತ್ತಮ ಚಾಲೂ ಸ್ಥಿತಿಯಲ್ಲಿರುವ ಪೇಪರ್ ಕಪ್ ಮೇಕಿಂಗ್ ಮಷಿನ್ ಮಾರಾಟಕ್ಕಿವೆ. ಸಂಪರ್ಕಿಸಿ. ಬೆಳಿಗ್ಗೆ 10 ರಿಂದ ಸಂಜೆ 5.00ರವರೆಗೆ ಮಾತ್ರ
95916 64448

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST ನೋಂದಣಿ ನವೀಕರಣ & ಆಡಿಟ್ ಮಾಡಿಕೊಡುತ್ತೇವೆ.**
94838 62779

**WANTED**
Mechanic
Note: Freshers & Experience Candidates
Good Salary, ESI, PF + Incentive
SRINIVASA HONDA
Hadadi Main Road, Davanagere
Ph No. : 88844 45242

**HOME LOANS**
House Purchase Loan, House Martgage Loans, Commercial complex Loans, Business Loans, Revenue House Loans, Salary Loans, Bank Loan Takover & Top up Loan, Current Account opens, Rural House Loans.
Contact: 98455 87805

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**ಇಂಡಿಯನ್ ಗ್ಯಾಸ್ ಲಕ್ಕಿ ಕೂಪನ್ ಡ್ರಾ**
ದಿನಾಂಕ : 25.09.2021ರ ಶನಿವಾರ
ಸಮಯ : ಬೆಳಿಗ್ಗೆ 10 ಗಂಟೆಗೆ
ಸ್ಥಳ : ಕರ್ನಾಟಕ ಸಾಹಿತ್ಯ ಪರಿಷತ್ ಭವನ, ತುಮಕೂರು.
(ದಾವಣಗೆರೆ ಜಿಲ್ಲಾ LPG ವಿತರಕರ ಅಸೋಸಿಯೇಷನ್ ಪರವಾಗಿ)
ಎಲ್. ದರ್ಶನ್, ಮಾಲೀಕರು, ಶಕ್ತಿ ಗ್ಯಾಸ್ ಏಜೆನ್ಸಿ, ದಾವಣಗೆರೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಉಚಿತ ಭವಿಷ್ಯ ಖಚಿತ ಪರಿಹಾರ**
ನಂ. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು, ನಿಮ್ಮಂತಾಗಲು, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಅತ್ತೆ, ಸೊಸೆ ಕಿರಿಕಿರಿ. 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಮಾಂತ್ರಿಕ ಜೋತಿಷ್ಯರು : 96068 18273

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859
87620 58369, 90080 67049

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಡೀಲರ್‌ಶಿಪ್ ಅವಕಾಶ**
ಚನ್ನಗಿರಿ, ಜಗಳೂರು ಮತ್ತು ಹೊನ್ನಾಳಿ ನಗರದಲ್ಲಿ ಕೇವಲ 4 ಲಕ್ಷ ಬಂಡವಾಳದೊಂದಿಗೆ ಅಧಿಕ ಲಾಭ ಹೊಂದಿರುವಂತಹ ಗೋ ಗ್ಯಾಸ್ ಕಮರ್ಷಿಯಲ್/ ವಾಣಿಜ್ಯ ಬಳಕೆಯ ಸಿಲಿಂಡರ್ ಡೀಲರ್‌ಶಿಪ್ ಲಭ್ಯವಿದೆ.
74831 76531

**ಪ್ರವೇಶ ಪ್ರಕಟಣೆ**
D.Pharma
Quali : PUC Science
Address:
Manasa Education Trust
L.K.Complex, 1st Floor, Ashoka Road, 1st Cross, Davangere.
PH : 97402 58276

**ತೂಕದ ಲೆಕ್ಕದ ಬಟ್ಟೆ ಅಂಗಡಿ**
ಸೇಲ್... ಸೇಲ್... ಸೇಲ್...
ಮಲಬಾರ್ ಕಾಟನ್‌ನಲ್ಲಿ
Limited Offer Only
1 ಕೆ.ಜಿ ~~799~~ ಈಗ 599/-,
2 ಕೆ.ಜಿ ~~1600~~ ಈಗ 999 ಮಾತ್ರ
97420 90612

# 30 ರಂದು ನಗರದಲ್ಲಿ ಪಂಚಮಸಾಲಿ ಸಮಾಜದ ಬೃಹತ್ ಸಮಾವೇಶ

ದಾವಣಗೆರೆ, ಸೆ.23- ಲಿಂಗಾಯತ ಪಂಚಮಸಾಲಿ ಜಗದ್ಗುರು ಲಿಂ. ಡಾ. ಮಹಂತ ಮಹಾಸ್ವಾಮಿಗಳವರ ಜಯಂತ್ಯೋತ್ಸವ, ಕರ್ನಾಟಕ ಸರ್ಕಾರದಿಂದ 2ಎ ಮೀಸಲಾತಿಯನ್ನು ಸಮಾಜಕ್ಕೆ ಪಡೆಯುವ ಉದ್ದೇಶದಿಂದ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಲಿಂಗಾಯತ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನ ಹಾಗೂ ರಾಜ್ಯ ಯುವ ಘಟಕದ ಅಧ್ಯಕ್ಷ ಬಿ.ಜೆ. ಅಜಯ್ ಕುಮಾರ್ ಪದಗ್ರಹಣ ಸಮಾರಂಭ ಇದೇ ದಿನಾಂಕ 30 ರ ಗುರುವಾರ ಸಂಜೆ 5 ಗಂಟೆಗೆ ನಗರದ ತ್ರಿಶೂಲ್ ಕಲಾ ಭವನದಲ್ಲಿ ನಡೆಯಲಿದೆ ಎಂದು ಮಾಜಿ ಶಾಸಕರೂ, 2ಎ ಮೀಸಲಾತಿ ಹೋರಾಟ ಸಮಿತಿ ಮಹಾಪ್ರಧಾನ ಕಾರ್ಯದರ್ಶಿಯೂ ಆದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಂದು ಮಧ್ಯಾಹ್ನ 3 ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ 5 ಸಾವಿರ ಬೈಕ್‌ಗಳ ರ್‍ಯಾಲಿ ನಡೆಯಲಿದ್ದು, 4 ಗಂಟೆಗೆ ಗಾಂಧಿ ವೃತ್ತದಿಂದ ವಿವಿಧ ಜಾನಪದ ವಾದ್ಯ ಮೇಳಗಳೊಂದಿಗೆ ಜಗದ್ಗುರುಗಳನ್ನು ಮೆರವಣಿಗೆ ಮೂಲಕ ತ್ರಿಶೂಲ್ ಕಲಾಭವನದ ವರೆಗೆ ಕರೆದೊಯ್ಯಲಾಗುವುದು. ಇದೇ ವೇಳೆ ಶ್ರೀಶೈಲ, ಹೊನ್ನಾಳಿ ಮತ್ತು ಐರಣಿ ಮಠದ ಆನೆಗಳು ಪಾಲ್ಗೊಳ್ಳುವುದು ವಿಶೇಷವಾಗಿದೆ. ಇದು ನಮ್ಮ ಸಮಾಜಕ್ಕೆ ಆನೆ ಬಲ ಬಂದಂತೆ ಎಂದರು.

ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಸುಮಾರು 50 ಸಾವಿರ ಸಮಾಜ ಬಂಧುಗಳು ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಕಾರ್ಯಕ್ರಮದಲ್ಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶೆಪ್ಪನವರ್, ಮುಖಂಡ ರಾದ ಬಸವನಗೌಡ ಪಾಟೀಲ್ ಯತ್ನಾಳ್ ಸೇರಿ ದಂತೆ ನಾಡಿನ ವಿವಿಧ ಮಠಾಧೀಶರು, ಸಮಾಜದ ಸಚಿವರು, ಶಾಸಕರು, ಸಂಸದರು, ವಿವಿಧ ಹಂತದ ಜನಪ್ರತಿನಿಧಿಗಳು ಆಗಮಿಸಲಿದ್ದಾರೆ. ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳನ್ನು ಕೂಡ ಆಹ್ವಾನಿಸಲಾಗುವುದು ಎಂದು ಮಾಹಿತಿ ನೀಡಿದರು.

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಜೊತೆಗೆ ಇತರೆ ಲಿಂಗಾಯತ ಸಮಾಜದ ಒಳಪಂಗಡಗಳಿಗೆ ಒಬಿಸಿ ಮೀಸಲಾತಿಯನ್ನು ನೀಡುವಂತೆ ಒತ್ತಾಯಿಸಿದರು.

ಈಗಾಗಲೇ ಹಲವು ಬಾರಿ ಸರ್ಕಾರಕ್ಕೆ ಮನವಿ ಮಾಡಲಾಗಿದ್ದು, ಯಡಿಯೂರಪ್ಪ ಮುಖ್ಯಮಂತ್ರಿ ಯಾಗಿದ್ದ ಸಂದರ್ಭದಲ್ಲಿ ಕೂಡಲಸಂಗಮದಿಂದ ಬೆಂಗಳೂರಿಗೆ ಪಾದಯಾತ್ರೆ ಮೂಲಕ ಸಮಾಜದ ಶಕ್ತಿ ಪ್ರದರ್ಶನ ಮಾಡಿ, ಮನವಿ ಕೂಡ ಸಲ್ಲಿಸಲಾಗಿತ್ತು. ಆದರೆ ಸಮಾಜಕ್ಕೆ ಸಕಾರಾತ್ಮಕವಾಗಿ ಸ್ಪಂದಿಸದೇ ಇರುವುದರಿಂದ ಸಮಾಜದ ಜನರು ಒಗ್ಗೂಡಿ ಅ. 1 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡುವುದಾಗಿ ತಿಳಿಸಿದರು.

ಮೈಸೂರು ಭಾಗದ ಗೌಡ ಲಿಂಗಾಯತರು, ಶಿವಮೊಗ್ಗ ಭಾಗದ ಮಲೆಗೌಡರು, ಬೆಳಗಾಂನ ದೀಕ್ಷಾ ಲಿಂಗಾಯತರು ಕೂಡ ಪಂಚಮಸಾಲಿ ಸಮಾಜವನ್ನು ಬೆಂಬಲಿಸಿದ್ದಾರೆ. ವಾಲ್ಮೀಕಿ, ಹಾಲುಮತ ಸಮಾಜದವರು ಕೂಡ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ವಿಚಾರವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಜಿಲ್ಲಾಧ್ಯಕ್ಷ ಆರ್.ವಿ. ಅಶೋಕ್ ಗೋಪನಾಳ್, ಮೋತಿ ಟಿ. ಶಂಕರಪ್ಪ, ಎಸ್. ಓಂಕಾರಪ್ಪ, ಮಹಾಂತೇಶ್ ಒಣರೊಟ್ಟಿ, ಪ್ರಭು ಕಲ್ಬುರ್ಗಿ, ಮಂಜಪ್ಪ ಹರಿಹರ, ಬಾತಿ ಶ್ರೀಧರ್, ಪ್ರಶಾಂತ್, ಬಸವರಾಜ್ ಬೆಳಲಗೆರೆ, ಸ್ವಾಗಿ ಶಾಂತಕುಮಾರ್, ಸ್ವಾಗಿ ಮುರುಗೇಶ್ ಮತ್ತಿತರರಿದ್ದರು.

## ನಗರದಲ್ಲಿ ನಾಳೆ 'ಹಾಸ್ಯ ದರ್ಬಾರ್' ಕಾರ್ಯಕ್ರಮ

ದಾವಣಗೆರೆ, ಸೆ. 23- ಸಿರಿ ಕನ್ನಡ ಖಾಸಗಿ ವಾಹಿನಿ ವತಿಯಿಂದ ನಗರದ ಬಿಐಇಟಿ ಕಾಲೇಜಿನ ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಾಡಿದ್ದು ದಿನಾಂಕ 25 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಮತ್ತು ಮಧ್ಯಾಹ್ನ 3 ಗಂಟೆಗೆ 'ಹಾಸ್ಯ ದರ್ಬಾರ್' ಮನರಂಜನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿರುತ್ತದೆ.

ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ಮುಖ್ಯಮಂತ್ರಿ ಚಂದ್ರು, ಎಂ.ಎಸ್. ನರಸಿಂಹಮೂರ್ತಿ, ಹೆಚ್. ಡುಂಡಿರಾಜ್, ಗುಂಡೂರಾವ್, ಸುಧಾ ಬರಗೂರು, ಯಶವಂತ್ ಸರ್‌ದೇಶಪಾಂಡೆ, ಮಿಮಿಕ್ರಿ ದಯಾನಂದ್ ಮುಂತಾದವರು ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮವು ಪ್ರತಿ ದಿನ ರಾತ್ರಿ 7.30 ಕ್ಕೆ 'ಸಿರಿ ಕನ್ನಡ' ವಾಹಿನಿಯಲ್ಲಿ ಪ್ರಸಾರವಾಗಲಿದೆ. ಇದರ ಜೊತೆ ಎರಡು ಮೆಗಾ ಧಾರಾವಾಹಿಗಳಾದ ಅಕ್ಕತಂಗಿಯರ ಅನುಬಂಧದ ಕಥೆ 'ಧ್ರುವ ನಕ್ಷತ್ರ' ಮತ್ತು ಮುಗ್ಧ ಮನಸ್ಸುಗಳ ಮುದ್ದು ಪ್ರೇಮ ಕಥೆ 'ಪ್ರೇಮ್ ಜೊತೆ ಅಂಜಲಿ' ಪ್ರಸಾರವಾಗಲಿವೆ.

ವಿಶೇಷ ಆಹ್ವಾನಿತರಾಗಿ ಶಾಸಕ ಎಸ್.ಎ. ರವೀಂದ್ರನಾಥ್, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಕೋವಿಡ್ ಉಚಿತ ಲಸಿಕೆ ವ್ಯವಸ್ಥೆ ಮಾಡಿದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರನ್ನು ಗೌರವಿಸಲಾಗುವುದು. ಕೋವಿಡ್ ವಾರಿಯರ್ ಆಗಿ ಕೆಲಸ ನಿರ್ವಹಿಸಿದ ಶಾಸಕ ಎಂ.ಪಿ. ರೇಣುಕಾಚಾರ್ಯ ದಂಪತಿಯನ್ನು ಸನ್ಮಾನಿಸಲಾಗುವುದು.

ಉಚಿತ ಪಾಸ್‌ಗಳಿಗಾಗಿ ರೋಜ್ ಮಾರ್ಟ್ ಸೇಫ್ಟಿ ಪ್ರೈವೇಟ್ ಲಿ., ಶಿವ ಮಾರ್ಟ್ ಎಸ್.ಎಸ್. ಬಡಾವಣೆ, ಶಾಂತಲಾ ವೆಡ್ಡಿಂಗ್ ಮಾಲ್ ಚಾಮರಾಜಪೇಟೆ, ರವಿತೇಜ ಟೆಕ್ಸ್‌ಟೈಲ್ಸ್ ಚಾಮರಾಜಪೇಟೆ, ಶ್ರೀ ಈಶ್ವರಿ ಕ್ರಿಯೇಶಷನ್ಸ್ ವಸಂತ ರಸ್ತೆ, ಆಹಾರ್-2000 ಗಾಂಧಿ ಸರ್ಕಲ್, ಆಹಾರ್ ಕೇಕ್ ಆಫ್ ದಿ ಡೇ ವಿದ್ಯಾನಗರ ಇಲ್ಲಿ ಸಂಪರ್ಕಿಸಬಹುದು.

## ಹಳೇಬಾತಿ ಸರ್ಕಾರಿ ಶಾಲೆಗೆ ಡಿಸಿ ಭೇಟಿ



ದಾವಣಗೆರೆ, ಸೆ.23 - ಹಳೇಬಾತಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಶಾಲೆಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಭೇಟಿ ನೀಡಿ ಪರಿಶೀಲಿಸಿದರು.

ಶಾಲೆಯ ಕೊಠಡಿಯೊಳಗೆ ಹಾವುಗಳು ಬರದಂತೆ ತಡೆಯುವುದು, ಶಾಲೆಯ ಆವರಣದ ಸ್ವಚ್ಛತೆ ಪರಿಶೀಲನೆ, ಸರ್ಕಾರಿ ಶಾಲೆಯ ದಾಖಲೆಗಳು ಮತ್ತು ಶಾಲೆಯ ಜಾಗದ ಅಳತೆ ಮಾಡಿ ಕಾಂಪೌಂಡ್ ಹಾಕುವುದು ಹಾಗೂ ಇನ್ನೂ ಅನೇಕ ಕುಂದು-ಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗಳು ಚರ್ಚಿಸಿದರು.

## ದಾವಣಗೆರೆ ವಿಶ್ವವಿದ್ಯಾನಿಲಯ ಪದವಿ ಸ್ನಾತಕ ಪದವಿ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಸೆ.22- ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಡಿ ನೂತನವಾಗಿ ಆರಂಭಿಸುತ್ತಿರುವ ಸ್ನಾತಕ ಪದವಿ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಬಿಎ, ಬಿಕಾಂ, ಬಿಎಸ್ಸಿ ಹಾಗೂ ಬಿಬಿಎ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು. ಪ್ರವೇಶಕ್ಕೆ ಅರ್ಜಿಗಳನ್ನು ವಿಶ್ವವಿದ್ಯಾನಿಲಯದ ಮುಖ್ಯ ಕಚೇರಿ, ಶಿವಗಂಗೋತ್ರಿ ಆವರಣ ಮತ್ತು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ವಿತರಿಸಲಾಗುತ್ತಿದೆ. ಆಸಕ್ತರು ಇದೇ ದಿನಾಂಕ 30ರ ಒಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿಗಳು ಕುಲಸಚಿವರ ಕಚೇರಿ ದಾವಣಗೆರೆ ವಿಶ್ವವಿದ್ಯಾನಿಲಯ (08192-208029), ಸಹಾಯವಾಣಿ (08192-208107), ದೃಶ್ಯಕಲಾ ಮಹಾವಿದ್ಯಾಲಯ (08192-220075) ಇಲ್ಲಿ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಪ್ರತಿಭಟನೆ

ನ್ಯಾ. ಸದಾಶಿವ ಆಯೋಗದ ವರದಿ ತಿರಸ್ಕರಿಸಲು ಆಗ್ರಹಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಇಂದು ಬೆಳಿಗ್ಗೆ 11ಕ್ಕೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗುವುದು ಎಂದು ಸಂಚಾಲಕ ಮಂಜಾನಾಯ್ಕ್ ತಿಳಿಸಿದ್ದಾರೆ.

# ಭಾರತ ಬಂದ್‌ಗೆ ಸಂಘಟನೆಗಳ ಬೆಂಬಲ

### ಕೇಂದ್ರ ಸರ್ಕಾರದ ಕೃಷಿ ವಿರೋಧಿ ನೀತಿಗೆ ಕಬ್ಬು ಬೆಳೆಗಾರರ ಸಂಘದ ಖಂಡನೆ

ದಾವಣಗೆರೆ, ಸೆ.23- ಕೇಂದ್ರ ಸರ್ಕಾರದ ಕೃಷಿ ವಿರೋಧಿ ನೀತಿ ಖಂಡಿಸಿ ಸಂಯುಕ್ತ ಕಿಸಾನ್ ಮೋರ್ಚಾ ಇದೇ ದಿನಾಂಕ 27 ರಂದು ಕರೆ ನೀಡಿರುವ ಭಾರತ ಬಂದ್‌ಗೆ ಕರೆ ನೀಡಿದ್ದು, ರೈತಪರ, ಜನಪರ, ವರ್ತಕ ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳು ಬೆಂಬಲ ಸೂಚಿಸಿವೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಕ್ಷೇತ್ರಕ್ಕೆ ಮಾರಕವಾಗಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು. ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿಯಾಗ ಬೇಕು. ವಿದ್ಯುತ್ ಖಾಸಗೀಕರಣ ನಿಲ್ಲಿಸಬೇಕು, ಕಬ್ಬಿನ ಎಫ್‌ಆರ್‌ಪಿ ದರ ಪುನರ್ ಪರಿಶೀಲಿಸ ಬೇಕು, ಅಗತ್ಯ ವಸ್ತುಗಳ ಬೆಲೆ, ಅಡುಗೆ ಅನಿಲ, ಡೀಸೆಲ್, ಪೆಟ್ರೋಲ್ ದರ ಇಳಿಸಬೇಕೆಂದು ಆಗ್ರ ಹಿಸಿ ಭಾರತ ಬಂದ್‌ಗೆ ಕರೆ ನೀಡಲಾಗಿದೆ ಎಂದರು.

ಕಬ್ಬಿನ ಎಫ್‌ಆರ್‌ಪಿ ಬೆಲೆ ಏರಿಕೆ ಮಾಡದೇ ಇದೀಗ ಕ್ವಿಂಟಾಲ್‌ಗೆ ಕೇವಲ 5 ರೂಗಳನ್ನು ಹೆಚ್ಚಿಗೆ ಮಾಡಿ ರೈತರಿಗೆ ದ್ರೋಹವೆಸಗಿದ್ದಾರೆ. ಕಳೆದ 10 ತಿಂಗಳಿಂದ ದೇಶದ 500 ಕ್ಕೂ ಹೆಚ್ಚು ರೈತ ಸಂಘಟನೆಗಳು ಒಂದಾಗಿ ಸಂಯುಕ್ತ ಕಿಸಾನ್ ಮೋರ್ಚಾ ಹೆಸರಿನಲ್ಲಿ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದು, 600 ಕ್ಕೂ ಹೆಚ್ಚು ರೈತರು ಪ್ರಾಣ ತ್ಯಾಗ ಮಾಡಿದ್ದಾರೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಆದ್ದರಿಂದ ಭಾರತ್ ಬಂದ್ ಗೆ ನಿರ್ಧರಿಸಿರುವುದಾಗಿ ತಿಳಿಸಿದರು.

ಕೇಂದ್ರ ಸರ್ಕಾರ ರೈತರಿಗೆ ಮಾರಕವಾದ ಮೂರು ಕೃಷಿ ಕಾಯಿದೆಗಳನ್ನು ಜಾರಿಗೆ ತಂದು ರೈತರ ಮರಣ ಶಾಸನ ಬರೆದಿದೆ. ಕೇಂದ್ರ ಸರ್ಕಾರ ರೈತರ ಜೊತೆ ಯಾವುದೇ ಸಭೆ ನಡೆಸದೇ ನಾಟಕೀಯ ವರ್ತನೆ ತೋರುತ್ತಿದೆ. ಕಬ್ಬಿನ ಎಫ್‌ಆರ್‌ಪಿ ಪುನರ್ ಪರಿಶೀಲಿಸದಿದ್ದರೆ ಅಕ್ಟೋಬರ್ 5 ರಂದು ವಿಧಾನಸೌಧ ಮುತ್ತಿಗೆ ಹಾಕುವ ಚಳವಳಿ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯ ಉಪಾಧ್ಯಕ್ಷ ತೇಜಸ್ವಿ ಪಟೇಲ್, ಪ್ರಧಾನ ಕಾರ್ಯದರ್ಶಿ ವೀರನಗೌಡ ಪಾಟೀಲ್, ಸಂಘಟನಾ ಕಾರ್ಯದರ್ಶಿ ದೇವರಾಜ್, ರೈತ ಮುಖಂಡ ಪೂಜಾರ ಅಂಜಿನಪ್ಪ, ಹನುಮೇಗೌಡ, ಶಂಕರ್ ಮತ್ತಿತರರಿದ್ದರು.

# ಎನ್‌ಡಬ್ಲ್ಯೂಕೆಎಸ್‌ಆರ್‌ಟಿಸಿ ಬಸ್‌ಗಳ ಜಪ್ತಿ

### ಅಪಘಾತದ ಪರಿಹಾರ ನೀಡದ ಹಿನ್ನೆಲೆ

ದಾವಣಗೆರೆ, ಸೆ.23- ಅಪಘಾತದ ಪರಿಹಾರ ನೀಡದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದಂತೆ ನಗರದಲ್ಲಿ ಬೆಳಗಾವಿ ಘಟಕದ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎರಡು ಬಸ್‌ಗಳನ್ನು ಇಂದು ಜಪ್ತಿ ಮಾಡಲಾಯಿತು.



ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ದಾವಣಗೆರೆಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದ ಆದೇಶದಂತೆ ನ್ಯಾಯಾಲಯದ ಅಮೀನರುಗಳ ಸಮ್ಮುಖದಲ್ಲಿ ಬೆಳಗಾವಿ ಘಟಕಕ್ಕೆ ಸೇರಿದ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎರಡು ಕೆಎಸ್ ಆರ್ ಟಿಸಿ ಬಸ್ ಗಳನ್ನು ಜಪ್ತಿ ಮಾಡಲಾಗಿದೆ.

ವಿವರ : ಆಗಸ್ಟ್ 8, 2009ರಲ್ಲಿ ಬೆಂಗಳೂರಿನಿಂದ ದಾವಣಗೆರೆಗೆ ಬರುತ್ತಿದ್ದಾಗ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗೆ ಮತ್ತೊಂದು ಕೆಎಸ್‌ಆರ್‌ಟಿಸಿ ಬಸ್ ಹಿಂಬದಿಯಿಂದ ಡಿಕ್ಕಿಪಡಿಸಿತ್ತು. ಪರಿಣಾಮ ವಾಯುವ್ಯ ಸಾರಿಗೆ ಬಸ್‌ನಲ್ಲಿ ಹಿಂಬದಿ ಸೀಟ್ ನಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ದಾವಣಗೆರೆ ವಾಸಿ ಸುದೀಪ್ ಎಂಬಾತ ಒಂದು ಕಾಲು ಕಳೆದುಕೊಂಡಿದ್ದ.

ಈ ಸಂಬಂಧ ಪ್ರಕರಣ ದಾಖಲಿಸಲಾಗಿತ್ತಲ್ಲದೇ, ಪರಿಹಾರಕ್ಕೆ ನ್ಯಾಯಾಲಯದ ಮೊರೆ ಹೋಗಲಾಗಿತ್ತು.

ಬೆಳಗಾವಿ ಘಟಕದಿಂದ 41,11,200 ರೂ. ಪರಿಹಾರ ನೀಡುವಂತೆ ದಾವಣಗೆರೆ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಆದೇಶಿಸಿತ್ತು.

ಪರಿಹಾರ ಕೋರಿದ್ದ ವ್ಯಕ್ತಿಯ ಪರ ವಕೀಲ ಎಸ್.ಎಂ. ಸಂತೋಷ್ ವಕಾಲತ್ತು ವಹಿಸಿದ್ದರು.

ಸುಮಾರು ಹನ್ನೊಂದುವರೆ ವರ್ಷ ಕಳೆದರೂ ಪರಿಹಾರ ನೀಡದ ಕಾರಣ ಬೆಳಗಾವಿ ಘಟಕಕ್ಕೆ ಸೇರಿದ ಎರಡು ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಜಪ್ತಿ ಮಾಡುವಂತೆ ನ್ಯಾಯಾಲಯವು ಇಂದು ಆದೇಶಿಸಿದೆ.

ನ್ಯಾಯಾಲಯದ ಆದೇಶದಂತೆ ನ್ಯಾಯಾಲಯದ ಅಮೀನರುಗಳಾದ ಶ್ರೀಧರ್, ಮಹೇಶ್, ಗುರು ಮಂಜುನಾಥ ಸೇರಿದಂತೆ ಮತ್ತಿತರೆ ಅಮೀನರ ಸಮ್ಮುಖದಲ್ಲಿ ಬಸ್‌ಗಳನ್ನು ಜಪ್ತಿ ಮಾಡಲಾಯಿತು.

## ಕೆ.ಹೆಚ್.ಬಿ. ಕಾಲೋನಿಗೆ ಮೇಯರ್ ಭೇಟಿ : ಕುಂದು - ಕೊರತೆ ಚರ್ಚೆ



ದಾವಣಗೆರೆ, ಸೆ.23- ಪಾಲಿಕೆ ಮಹಾಪೌರ ಟಿ.ಎಸ್.ವೀರೇಶ್ ಅವರು ನಗರದ ಕೆ.ಹೆಚ್.ಬಿ ಕಾಲೋನಿಗೆ ಇಂದು ಭೇಟಿ ನೀಡಿ, ಇಲ್ಲಿನ ನಾಗರಿಕರ ಕುಂದು - ಕೊರತೆಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವೀರೇಶ್, ಕಾಲೋನಿಯನ್ನು ಇತ್ತೀಚೆಗೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ವಹಿಸಲಾಗಿದೆ. ಹಂತ - ಹಂತವಾಗಿ ಎಲ್ಲಾ ಸಮಸ್ಯೆಗಳನ್ನು ಬಗೆ ಹರಿಸುತ್ತೇವೆ ಎಂದರು.

ಕಾಲೋನಿ ವಾಸಿಯೂ ಆಗಿರುವ ಶಿಕ್ಷಕ ಮಲ್ಲಿಕಾರ್ಜುನ್ ಬಾವಿಕಟ್ಟಿ ಮಾತನಾಡಿ, ಕಾಲೋನಿಯು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ನಂತರ ಸಾರಿಗೆ ಸಂಪರ್ಕ ಒದಗಿಸಲಾಗಿದೆ. ಇದೊಂದು ಸ್ವಾಗತಾರ್ಹ ಕಾರ್ಯ. ಅದೇ ರೀತಿ ಬೀದಿ ದೀಪ, ಪ್ರಾಥಮಿಕ ಆರೋಗ್ಯ ಕೇಂದ್ರ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸಮರ್ಪಕ ಯು.ಜಿ.ಡಿ ವ್ಯವಸ್ಥೆ, ಉದ್ಯಾನವನದ ನಿರ್ವಹಣೆ ಮಾಡಿದರೆ ಕಾಲೋನಿಯ ಎಲ್ಲಾ ನಾಗರಿಕರು ಮುಕ್ತ ರೀತಿಯಲ್ಲಿ ಓಡಾಡಲು ಸಹಕಾರಿಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ನಾಗರಾಜ್ ಕಲ್ಲಳ್ಳಿ, ಅಧಿಕಾರಿ ವರ್ಗ, ಕಾಲೋನಿಯ ನಾಗರಿಕರಾದ ದ್ಯಾಮಣ್ಣ, ಬಸವರಾಜ್ ಕೂಲೇರ್, ಟಿ. ಮುರುಗೇಶ್, ರೇವಣಪ್ಪ, ಭೈರಪ್ಪ, ಭಾಸ್ಕರ್, ಸೋಮಣ್ಣ, ಜಿ.ಹೆಚ್.ಅಶೋಕ್, ಮತ್ತಿತರರಿದ್ದರು.

## ರೋಟರಿ : ಸ್ಪರ್ಧಾ ವಿಜೇತರಿಗೆ ಬಹುಮಾನ



ದಾವಣಗೆರೆ, ಸೆ. 23- ರೋಟರಿ ಕ್ಲಬ್ ವತಿಯಿಂದ ಬಸಾಪುರದ ಶ್ರೀ ರೇವಣಸಿದ್ದೇಶ್ವರ ವಸತಿಯುತ ಪ್ರೌಢಶಾಲೆಯಲ್ಲಿ ಓಜೋನ್ ಸಂರಕ್ಷಣೆ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಿದ್ದು, ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೆಚ್. ಆಂಜನೇಯ ಮೂರ್ತಿ ವಹಿಸಿದ್ದರು. ಹತ್ತನೇ ತರಗತಿಯ ರಜಿಯಾ ಸುಲ್ತಾನ್ ಪ್ರಥಮ ಸ್ಥಾನ, ಆರ್. ಅಮುದ ದ್ವಿತೀಯ ಸ್ಥಾನ ಪಡೆದರು. ಡಾ. ಜೆ.ಬಿ. ರಾಜ್ ಬಹುಮಾನ ವಿತರಿಸಿದರು.

## ಹೊನ್ನಾಳಿ ಜಾತ್ರಾ ಮಹೋತ್ಸವದ ಸಮಾರೋಪ



ಹೊನ್ನಾಳಿ, ಸೆ.23- ಹಿರೇಕಲ್ಮಠದ ಚನ್ನಪ್ಪಸ್ವಾಮಿ ರಥೋತ್ಸವವು ವ್ಯವಸ್ಥಿತವಾಗಿ ನಡೆಯಲು ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದನೆ ಹಾಗೂ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭ ನಡೆಯಿತು.

ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಶ್ರೀಗಳ ಸಾನ್ನಿಧ್ಯದಲ್ಲಿ ನಡೆದ ಸಭೆಯಲ್ಲಿ ಜಾತ್ರಾ ಮಹೋತ್ಸವದಲ್ಲಿ ಜಮಾ-ಖರ್ಚಿನ ಚರ್ಚೆಯೊಂದಿಗೆ ಜಾತ್ರೆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕಾರ್ಯಕರ್ತರು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೋರಿ ಗುರುಲಿಂಗಣ್ಣ, ಕೋರಿ ಮಲ್ಲಿಕಣ್ಣ, ಚನ್ನಯ್ಯ ಬೆನ್ನೂರಮಠ, ಬಸವರಾಜ ಪಾಟೀಲ್, ಕುಂಬಾರ ರುದ್ರಣ್ಣ, ಮಹೇಶ, ಮಹೇಶ್ವರಪ್ಪ ಹಾಗು ಸಮಿತಿಯ ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

## ದಾವಣಗೆರೆ ಕ್ಲಬ್‌ನಲ್ಲಿ ಇಂದು ಉಚಿತ ಕೋವಿಶೀಲ್ಡ್ ಲಸಿಕೆ

ದಾವಣಗೆರೆ ಕ್ಲಬ್ ಆವರಣದಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 4 ರವರೆಗೆ ಉಚಿತ ಕೋವಿಶೀಲ್ಡ್ ಲಸಿಕೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

18 ವರ್ಷ ಮತ್ತು 45 ವರ್ಷ ಮೇಲ್ಪಟ್ಟ ಒಂದನೇ ಮತ್ತು ಎರಡನೇ ಡೋಸ್ ಲಸಿಕೆ ಹಾಕಲಿದ್ದು, ಕ್ಲಬ್ ಸದಸ್ಯರು ಹಾಗೂ ಕುಟುಂಬದವರು ಆಧಾರ್ ಕಾರ್ಡ್‌ನೊಂದಿಗೆ ಆಗಮಿಸಿ, ಲಸಿಕೆ ಪಡೆಯಲು ಗೌರವ ಕಾರ್ಯದರ್ಶಿ ಕೋರಿದ್ದಾರೆ.

## ವಿನೋಬನಗರದಲ್ಲಿ ಇಂದು ಲಸಿಕಾ ಶಿಬಿರ

ಕೋವಿಶೀಲ್ಡ್ ಲಸಿಕೆ ವಿತರಣಾ ಶಿಬಿರವು ವಿನೋಬನಗರ 1ನೇ ಮುಖ್ಯರಸ್ತೆಯ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದ ಎದುರಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 9.30 ಕ್ಕೆ ನಡೆಯಲಿದೆ. ಸಾರ್ವಜನಿಕರು ಶಿಬಿರದ ಸದುಪಯೋಗ ಪಡಿಸಿಕೊಳ್ಳುವಂತೆ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಕೋರಿದ್ದಾರೆ.

# ಜನರ ಆರೋಗ್ಯ ರಕ್ಷಣೆಯಲ್ಲಿ ಪೌರ ಕಾರ್ಮಿಕರ ಪಾತ್ರ ದೊಡ್ಡದು

### ರಾಣೇಬೆನ್ನೂರು ನಗರಸಭೆ ಅಧ್ಯಕ್ಷರಾದ ರೂಪಾ ಚಿನ್ನಿಕಟ್ಟಿ



ರಾಣೇಬೆನ್ನೂರು, ಸೆ.23 - ನೀವು ದಕ್ಷತೆ, ಪ್ರಾಮಾಣಿಕತೆಯಿಂದ ಕೆಲಸ ಮಾಡುವುದರಿಂದಾಗಿ ನಗರದ ಜನತೆ ಆರೋಗ್ಯದಿಂದಿದ್ದಾರೆ. ನಗರದ ಅಂದ ಹೆಚ್ಚುತ್ತಿದೆ. ಕೋವಿಡ್ ಸಂದರ್ಭದಲ್ಲಿ ನಿಮ್ಮ ಜೀವದ ಹಂಗು ತೊರೆದು ಸೇವೆ ಮಾಡಿರುವ ನೀವು ಅಭಿನಂದನಾರ್ಹರು ಎಂದು ನಗರಸಭೆ ಅಧ್ಯಕ್ಷರಾದ ರೂಪಾ ಚಿನ್ನಿಕಟ್ಟಿ ಹೇಳಿದರು.

ಅವರು ಗುಡ್ಡದ ಬಸಪ್ಪ ಸ್ಮಾರಕ ಭವನದಲ್ಲಿ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ನಿಮ್ಮ ಕಾಯಕ ನಿಷ್ಠೆಯಿಂದ ರಾಜ್ಯದಲ್ಲಿ ನಾವು 13ನೇ ಸ್ಥಾನದಲ್ಲಿದ್ದೇವೆ. ನಿಮ್ಮನ್ನು ಸರ್ಕಾರ ವಾರಿಯರ್ಸ್ ಎಂದು ಗುರುತಿಸಿದ್ದು ಸರ್ಕಾರ ಕೊಡುವ ಎಲ್ಲ ಸೌಲಭ್ಯ ಗಳನ್ನು ಸದುಪಯೋಗ ಪಡಿಸಿಕೊಂಡು ನಿಮ್ಮ ಮಕ್ಕಳ ಭವಿಷ್ಯವನ್ನು ರೂಪಿಸಿಕೊಳ್ಳಿರಿ ಎಂದು ಹಿರಿಯ ಸದಸ್ಯ ಕಾಂಗ್ರೆಸ್‌ನ ಪುಟ್ಟಪ್ಪ ಮರಿಯಮ್ಮನವರ ಹೇಳಿದರು.

ಎಲ್ಲ ಸರ್ಕಾರಗಳು ನಿಮಗೆ ಹೆಚ್ಚು ಹೆಚ್ಚು ಸಹಾಯ, ಸೌಲಭ್ಯ ಕಲ್ಪಿಸುತ್ತಿದ್ದು ನಿಮ್ಮ ಮಕ್ಕಳನ್ನು ಪೌರ ಕಾರ್ಮಿಕರ ಕೆಲಸಕ್ಕೆ ಕಳಿಸುವುದನ್ನು ಬಿಟ್ಟು ಉತ್ತಮ ಶಿಕ್ಷಣ ಕೊಡಿಸಿ ಎಂಜಿನಿಯರ್, ಡಾಕ್ಟರ್ ಮಾಡುವ ಪ್ರಯತ್ನ ಮಾಡಿರಿ ಎಂದು ಬಿಜೆಪಿ ಸದಸ್ಯ ಪ್ರಕಾಶ್ ಪೂಜಾರ ಹೇಳಿದರು.

ಉಪಾಧ್ಯಕ್ಷರಾದ ಕಸ್ತೂರಿ ಚಿಕ್ಕಬಿದರಿ, ಸದಸ್ಯರಾದ ಮಲ್ಲಪ್ಪ ಅಂಗಡಿ, ಗಂಗಮ್ಮ ಹಾವನೂರ, ಪ್ರಕಾಶ ಬುರಡಿಕಟ್ಟಿ, ಶೇಖಪ್ಪ ಹೊಸಗೌಡ್ರ, ಸುಮಾ ಹುಚ್ಚಗೊಂಡರ, ಪೌರಾಯುಕ್ತ ಉದಯಕುಮಾರ್ ಮತ್ತಿತರರು ಶುಭ ಕೋರಿದರು. ಬಿ.ವೈ. ಜಗದೀಶ್ ಸ್ವಾಗತಿಸಿದರು. ಮಧು ಕಂಬಳಿ ವಂದಿಸಿದರು.

## ಸಿದ್ದಗಂಗಾ ಎಜುಕೇಷನಲ್ ಟ್ರಸ್ಟ್‌ನಿಂದ ನಾಳೆ ಶಿಕ್ಷಕರಿಗೆ ಕಾರ್ಯಾಗಾರ

ದಾವಣಗೆರೆ, ಸೆ.23 - ನಗರದ ಶ್ರೀ ಸಿದ್ದಗಂಗಾ ಎಜುಕೇಷನಲ್ ಟ್ರಸ್ಟ್‌ನ ವತಿಯಿಂದ ಕೊಂಡಜ್ಜಿಯಲ್ಲಿರುವ ಎಂ.ಎಸ್.ಶಿವಣ್ಣ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 25ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಶಿಕ್ಷಕರಿಗಾಗಿ ಉಪಯುಕ್ತವಾದ ಶೈಕ್ಷಣಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಹುಬ್ಬಳ್ಳಿಯ ಲೈಫ್ ಕ್ಲಿನಿಕ್ ಖ್ಯಾತಿಯ ಡಾ. ಗುರುರಾಜ ಪಾಟೀಲ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಈ ಶೈಕ್ಷಣಿಕ ಕಾರ್ಯಾಗಾರವನ್ನು ನಡೆಸಲಿದ್ದಾರೆ. ಇವರಿಗೆ ಸಂಪನ್ಮೂಲ ವ್ಯಕ್ತಿಯಾಗಿ 21 ವರ್ಷಗಳಿಗೂ ಅಧಿಕ ಅನುಭವವಿದ್ದು, ಇಲ್ಲಿಯವರೆಗೆ 4 ಲಕ್ಷಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದ್ದಾರೆ.

ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ನಿರ್ದೇಶಕ ಜಯಂತ್ ಡಿ.ಎಸ್, ಎಜುವಿಷನ್ ಟಿ.ಎಲ್. ಎಸ್‌ನ ಶ್ರೀನಿವಾಸ್ ಸಿ.ಎಸ್ ಮತ್ತು ವಿಜಯಕುಮಾರ್ ತರಬೇತಿಯಲ್ಲಿ ಉಪಸ್ಥಿತರಿರುತ್ತಾರೆ. ಕಾರ್ಯಾಗಾರದಲ್ಲಿ ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ, ಹರಪನಹಳ್ಳಿಯ ಪರ್ಲ್ ಪಬ್ಲಿಕ್ ಸ್ಕೂಲ್ ಮತ್ತು ಕಕ್ಕರಗೊಳ್ಳದ ಪಟೇಲ್ ವೀರಪ್ಪ ಇಂಗ್ಲಿಷ್ ಮೀಡಿಯಂ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಇವುಗಳ ಶಿಕ್ಷಕರು ಇದರಲ್ಲಿ ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದಿನಿಂದ ಎಸ್‌ಎಸ್‌ವೈ ಶಿಬಿರ

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಶ್ರೀ ವಿನಾಯಕ ದೇವಸ್ಥಾನದ ಆವರಣದಲ್ಲಿ ಸಿದ್ಧ ಸಮಾಧಿ ಯೋಗದ (ಎಸ್.ಎಸ್.ವೈ) ತರಬೇತಿ ಶಿಬಿರವು ಇಂದಿನಿಂದ ಆರಂಭಗೊಳ್ಳಲಿದ್ದು, ಪ್ರತಿ ದಿನ ಸಂಜೆ 5.45ಕ್ಕೆ ನಡೆಯಲಿದೆ.

ಜ್ಞಾಪಕ ಶಕ್ತಿ, ಸ್ಮರಣ ಶಕ್ತಿ, ಉದ್ವೇಗರಹಿತ ಜೀವನ, ರಕ್ತ ದೊತ್ತಡ, ಮಧುಮೇಹ, ಅಸ್ತಮಾ, ಹೃದಯ ರೋಗ, ಸಂಧಿವಾತ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಸಿದ್ಧ ಸಮಾಧಿ ಯೋಗದ ಬಗ್ಗೆ ತಿಳಿಯಲು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ, ಮಾಹಿತಿಗಾಗಿ 83103 56553 ಸಂಪರ್ಕಿಸುವಂತೆ ರೇಣುಕಾ ಮಾತಾಜಿ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ರಫ್ತುದಾರರ ಸಮಾವೇಶ

ದಾವಣಗೆರೆ, ಸೆ.23- ಜಿಲ್ಲಾ ಕೈಗಾರಿಕಾ ಉತ್ತೇಜನ ಹಾಗೂ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ವಾಣಿಜ್ಯ ಸಪ್ತಾಹ ರಫ್ತುದಾರರ ಸಮಾವೇಶವನ್ನು ನಾಡಿದ್ದು ದಿನಾಂಕ 25ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಹೋಟೆಲ್ ಓಷನ್ ಪಾರ್ಕ್‌ನಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ.






ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.) ☎ 08192-221669

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು, (ಎಸ್.ಬಿ.ಸಿ.)

ಬಸ್ ಸೌಲಭ್ಯವಿದೆ.

www.sbcfgc.com | email: sbcdvg12@rediffmail.com

ಎಸ್.ಎಸ್. ಲೇ ಔಟ್, 'ಎ' ಬ್ಲಾಕ್, ದಾವಣಗೆರೆ-04.

ಪ್ರವೇಶ ಪ್ರಕಟಣೆ 2021-22

ಪಿ.ಯು.ಸಿ. ಮುಗಿಸಿದ ವಿದ್ಯಾರ್ಥಿನಿಯರಿಗೆ ಸುವರ್ಣಾವಕಾಶ ಮಹಿಳೆಯರಿಗೆ ಮಾತ್ರ

BCA, B.Com., BBA & B.A. (HEP, HEE, HPS)

ಪ್ರವೇಶಕ್ಕೆ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9844482100, 9964675300

FEW SEATS ARE AVAILABLE TO JOIN THE ABOVE COURSES.

2020-21 ನೇ ಸಾಲಿನ 5 ನೇ ಸೆಮಿಸ್ಟರ್ ಪದವಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರು



ಅನಿತಾ ಬಿ.ಆರ್. ಬಿ.ಕಾಂ. 97% | ಅನುಷಾ ಜಿ. ಬಿ.ಬಿ.ಎ. 86% | ಚೇತನ ಎನ್. ಬಿ.ಸಿ.ಎ. 93% | ದೀಪಾ ಎಚ್. ಬಿ.ಎ. 86%

2019-20 ನೇ ಸಾಲಿನಲ್ಲಿ ಬಿ.ಕಾಂ. ಮತ್ತು ಬಿ.ಸಿ.ಎ. ಪದವಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿನಿಯರು



ಕು. ಐಶ್ವರ್ಯ ಶಾನ್‌ಬಾಗ್ ಬಿ.ಕಾಂ.-2ನೇ ರ‍್ಯಾಂಕ್ | ಕು. ರಕ್ಷಾ ಅಜ್ಜಂಪುರ ಬಿ.ಕಾಂ.-3ನೇ ರ‍್ಯಾಂಕ್ | ಕು. ತೇಜ ಜಿ. ಬಿ.ಕಾಂ.- 3ನೇ ರ‍್ಯಾಂಕ್ | ಕು. ತೇಜಸ್ವಿನಿ ಟಿ.ಆರ್. ಬಿ.ಸಿ.ಎ.-5ನೇ ರ‍್ಯಾಂಕ್

ಕಾಲೇಜಿನ ವೈಶಿಷ್ಟ್ಯತೆಗಳು :

- ಅನುಭವಿ ಮತ್ತು ನುರಿತ ಪ್ರಾಧ್ಯಾಪಕರು
- ಅತ್ಯಾಧುನಿಕ ಪ್ರಯೋಗಾಲಯಗಳು
- ವಿಶೇಷ ಉಪನ್ಯಾಸ,ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು
- ಕಾಲೇಜ್ ಬಸ್ ಸೌಲಭ್ಯ
- ಕಳೆದ 15 ವರ್ಷಗಳಿಂದ ಕಾಲೇಜಿಗೆ 55 ರ‍್ಯಾಂಕ್‌ಗಳು ಲಭಿಸಿವೆ
- 20,000 ಪುಸ್ತಕಗಳ ಸಂಗ್ರಹ ಹೊಂದಿರುವ ಗ್ರಂಥಾಲಯ
- ಪ್ರತಿವರ್ಷ ಪ್ರತಿಷ್ಠಿತ ಕಂಪನಿಗಳಿಂದ ಕ್ಯಾಂಪಸ್ ಸಂದರ್ಶನ
- ಸ್ಮಾರ್ಟ್ ತರಗತಿಗಳು
- ಸುಸಜ್ಜಿತ ಆಟದ ಮೈದಾನ
- ಪ್ರತಿ ತರಗತಿ ಹಾಗೂ ಪ್ರಯೋಗಾಲಯಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆ


# ಮೂರು ವರ್ಷಗಳ ಯಶಸ್ಸಿನತ್ತ ಬ್ಯೂಟಿ ಪಾರ್ಲರ್ ಅಸೋಸಿಯೇಷನ್



ದಾವಣಗೆರೆ, ಸೆ.23 - ಜಿಲ್ಲಾ ಬ್ಯೂಟಿ ಪಾರ್ಲರ್ ಅಸೋಸಿಯೇಷನ್‌ನ 3ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀಮತಿ ಕವಿತಾ ಚಂದ್ರಶೇಖರ್, ಕೊರೊನಾ ಮಹಾಮಾರಿಯಿಂದ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯ ದೊರೆಯದಿದ್ದರೂ, ತಮ್ಮ-ತಮ್ಮ ಕುಟುಂಬದ ನಿರ್ವಹಣೆ ಮಾಡುತ್ತಾ, ಒಗ್ಗಟ್ಟಿನ ಏಕಮಂತ್ರದಿಂದ ಅಸೋಸಿಯೇಷನ್‌ನ ಮೂರು ವರ್ಷಗಳ ಯಶಸ್ವೀ ಪಯಣಕ್ಕೆ ಶುಭಾಶಯ ಕೋರಿದರು.

ಉಪಾಧ್ಯಕ್ಷೆ ಆಶಾ ಕೃಷ್ಣಮೂರ್ತಿ ಅಸೋಸಿಯೇಷನ್ ಸದಸ್ಯರಲ್ಲಿನ ಸಹಭಾಗಿತ್ವ, ಒಗ್ಗಟ್ಟು, ಸಹಕಾರದ ಮನೋಭಾವನೆ ನಮ್ಮ ಅಸೋಸಿಯೇಷನ್ ನಿಂದ ಸಾಧ್ಯವಾಯಿತು ಎಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಪದ್ಮಾವತಿ, ಶೈಲಾ, ಆಶಾ, ಸೌಮ್ಯ, ಪದ್ಮಪ್ರಿಯ, ಸೋನು, ಭಾಗ್ಯ, ಅನುಪಮ, ಗೀತಾ, ಅನುಪ್ರಿಯ, ಕವಿತಾ, ರೂಪ, ಸೀಮಾ ಉಪಸ್ಥಿತರಿದ್ದರು.

## ವೋಟರ್ ಹೆಲ್ಪ್‌ಲೈನ್‌ನಲ್ಲಿ ನೋಂದಣಿಗೆ ಮನವಿ

ದಾವಣಗೆರೆ, ಸೆ.22- ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2022 ರ ಸಂಬಂಧ ಎಲ್ಲ ಮತದಾರರು, ನಾಗರಿಕರು ಮತದಾರರ ಸಹಾಯವಾಣಿ ಆ್ಯಪ್ (ವೋಟರ್ ಹೆಲ್ಪ್‌ಲೈನ್ ಆ್ಯಪ್) ಡೌನ್‌ಲೋಡ್ ಮಾಡಿಕೊಂಡು ನೋಂದಣಿಯಾಗುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮನವಿ ಮಾಡಿದ್ದಾರೆ.

ಜಿಲ್ಲೆಯ ಎಲ್ಲಾ ಮತದಾರರು, ನಾಗರಿಕರು ಮೊಬೈಲ್‌ನಲ್ಲಿ ಪ್ಲೇ ಸ್ಟೋರ್ ನಿಂದ ಮತದಾರರ ಸಹಾಯವಾಣಿ ಆಪ್ ಡೌನ್‌ಲೋಡ್ ಮಾಡಿಕೊಂಡು, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿನ ಸೇರ್ಪಡೆ, ಒಂದು ವೇಳೆ ಮತದಾರರು ಮೃತರಾಗಿದ್ದಲ್ಲಿ ಮತ್ತು ವರ್ಗಾವಾಗಿದ್ದಲ್ಲಿ ಮತದಾರರ ಪಟ್ಟಿಯಿಂದ ತೆಗೆದುಹಾಕುವುದು ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರು, ವಿಳಾಸ, ಲಿಂಗ, ವಯಸ್ಸು ಇತರೇ ದೋಷಗಳಿದ್ದಲ್ಲಿ ಸರಿಪಡಿಸಿಕೊಳ್ಳಬೇಕೆಂದು ಕೋರಲಾಗಿದೆ. ಹೆಚ್ಚಿನ ತಾಂತ್ರಿಕ ಸಹಾಯಕ್ಕಾಗಿ ಕಛೇರಿ ವೇಳೆಯಲ್ಲಿ ಜಿಲ್ಲಾ ಮತದಾರ ಸಹಾಯವಾಣಿ 08192-272953 ಗೆ ಕರೆ ಮಾಡಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## 2 ದೃಢ, 8 ಗುಣ

ದಾವಣಗೆರೆ, ಸೆ.23- ಜಿಲ್ಲೆಯಲ್ಲಿ ಗುರುವಾರ ಇಬ್ಬರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, 8 ಜನರು ಗುಣಮುಖರಾಗಿದ್ದಾರೆ. ದಾವಣಗೆರೆ ತಾಲ್ಲೂಕು ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 103 ಸಕ್ರಿಯ ಪ್ರಕರಣಗಳಿವೆ.

**13 ಮಕ್ಕಳಿಗೆ ಪಾಸಿಟಿವ್:** ಕಳೆದ ಸೆ.6 ರಿಂದ 20ರವರೆಗೆ 14 ಮಕ್ಕಳಿಗೆ ಪಾಸಿಟಿವ್ ಬಂದಿರುವುದಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. 5 ವರ್ಷದ ಒಳಗಿನ 1 ಮಗು ಹಾಗೂ ಐದರಿಂದ 15 ವರ್ಷದೊಳಗಿನ 4 ಹಾಗೂ 16 ರಿಂದ 18 ವರ್ಷದೊಳಗಿನ 9 ಮಕ್ಕಳಲ್ಲಿ ಸೋಂಕು ಕಾಣಿಸಿಕೊಂಡಿದೆ.

## ನೀರು ಪೂರೈಕೆಯಲ್ಲಿ ಇಂದು ವ್ಯತ್ಯಯ

ಬಾತಿ ಪಂಪ್‌ಹೌಸ್ ಹಾಗೂ ಟಿ.ವಿ. ಸ್ಟೇಷನ್ ಪಂಪ್‌ಹೌಸ್‌ನಲ್ಲಿ ವಿದ್ಯುತ್ ನಿಲುಗಡೆಯಾಗಿರುವುದರಿಂದ ದಾವಣಗೆರೆಯಲ್ಲಿ ಇಂದು ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ ತಿಳಿಸಿದ್ದಾರೆ.

## ಸೊಕ್ಕೆ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ಇಲ್ಲ

ಸೊಕ್ಕೆ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಪಂಪ್‌ಸೆಟ್ ಹಾಗೂ ಎನ್.ಜೆ.ವೈ ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಪಿಎಂ ಕೇರ್ಸ್ ಭಾರತ ಸರ್ಕಾರದ ನಿಧಿಯಲ್ಲ

### ಹಣ ಸಂಚಿತ ನಿಧಿಗೆ ಹೋಗುವುದಿಲ್ಲ: ಹೈಕೋರ್ಟ್‌ಗೆ ಪಿಎಂ ಕಚೇರಿ ಕಾರ್ಯದರ್ಶಿ ಮಾಹಿತಿ

ನವದೆಹಲಿ, ಸೆ. 23 – ಪಿ.ಎಂ. ಕೇರ್ಸ್ ನಿಧಿ ಭಾರತ ಸರ್ಕಾರದ ನಿಧಿಯಲ್ಲ. ಈ ನಿಧಿಯಲ್ಲಿ ಸಂಗ್ರಹಿಸಲಾದ ಹಣ ಸರ್ಕಾರದ ಸಂಚಿತ ನಿಧಿಗೆ ಹೋಗುವುದಿಲ್ಲ ಎಂದು ದೆಹಲಿ ಹೈಕೋರ್ಟ್‌ಗೆ ತಿಳಿಸಲಾಗಿದೆ.

ಪ್ರಧಾನ ಮಂತ್ರಿ ಕಚೇರಿಯ ಅಧೀನ ಕಾರ್ಯದರ್ಶಿ ಈ ನಿಧಿಯ ಗೌರವ ಹುದ್ದೆಯ ಆಧಾರದ ಮೇಲೆ ಈ ನಿಧಿಯನ್ನು ನಿರ್ವಹಿಸುತ್ತಿದ್ದಾರೆ. ಅವರು ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದ್ದು, ಮಹಾಲೇಖಪಾಲರು ರೂಪಿಸಿದ ಪಟ್ಟಿಯಲ್ಲಿರುವ ಲೆಕ್ಕಪರಿಶೋಧಕರೊಬ್ಬರಿಂದ ಈ ನಿಧಿಯ ಲೆಕ್ಕಪರಿಶೋಧನೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಪಿಎಂ ಕೇರ್ಸ್ ನಿಧಿಯನ್ನು ಸರ್ಕಾರದ ನಿಧಿ ಎಂದು ಪರಿಗಣಿಸಬೇಕು. ಈ ನಿಧಿಯಲ್ಲಿ ಪಾರದರ್ಶಕತೆ ತರಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ನೇತೃತ್ವದ ಪೀಠ ಈ ಬಗ್ಗೆ ವಿಚಾರಣೆ ನಡೆಸಿದ್ದು, ಸೆಪ್ಟೆಂಬರ್ 27ರಂದು ಮುಂದಿನ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ಈ ನಿಧಿಯಲ್ಲಿ ಪಾರದರ್ಶಕತೆ ತರಲು ಲೆಕ್ಕ ಪರಿಶೋಧಕರ ವರದಿಯನ್ನು ಟ್ರಸ್ಟ್‌ನ ಅಧಿಕೃತ ವೆಬ್ ತಾಣದಲ್ಲಿ ಪ್ರಕಟಿಸಲಾಗುತ್ತಿದೆ. ನಿಧಿಗೆ ಬಂದ ಹಣ ಹಾಗೂ ಬಳಕೆಯಾದ ವಿವರಗಳನ್ನು ತಿಳಿಸಲಾಗುತ್ತಿದೆ ಎಂದು ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶ್ರೀವಾಸ್ತವ ಹೇಳಿದ್ದಾರೆ.

ಈ ನಿಧಿಗೆ ಆನ್‌ಲೈನ್, ಚೆಕ್ ಅಥವಾ ಡಿ.ಡಿ. ಮೂಲಕವೇ ದೇಣಿಗೆ ಬರುತ್ತಿದೆ. ಲೆಕ್ಕಪರಿಶೋಧಕರಿಂದ ತಪಾಸಣೆ ನಡೆಸಿ, ವೆಚ್ಚದ ವಿವರಗಳನ್ನು ಪ್ರದರ್ಶಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

ಪಾರದರ್ಶಕತೆ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಈ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ. ಈ ಟ್ರಸ್ಟ್‌ನ ಹಣ ಸರ್ಕಾರದ ಹಣವಲ್ಲ ಹಾಗೂ ಇದರ ನಿಧಿ ಸಂಚಿತ ನಿಧಿಗೆ ಹೋಗುವುದಿಲ್ಲ ಎಂದು ಶ್ರೀವಾಸ್ತವ ತಿಳಿಸಿದ್ದಾರೆ. ಈ ನಿಧಿಯನ್ನು ಸಂವಿಧಾನ, ಇಲ್ಲವೇ ಸಂಸತ್ತಿನ ಯಾವುದೇ ಕಾಯ್ದೆ ಇಲ್ಲವೇ ರಾಜ್ಯಗಳ ಶಾಸನದಿಂದ ರಚಿಸಿಲ್ಲ. ಪಿಎಂ ಕೇರ್ಸ್ ಟ್ರಸ್ಟ್ ಕಾರ್ಯವನ್ನು ಗೌರವದ ಆಧಾರದ ಮೇಲೆ ನಿರ್ವಹಿಸುತ್ತಿರುವುದಾಗಿ ಅಧಿಕಾರಿ ಹೇಳಿದ್ದಾರೆ.

ನಾನು ಕೇಂದ್ರ ಸರ್ಕಾರದ ಅಧಿಕಾರಿಯಾಗಿದ್ದರೂ ಸಹ ಗೌರವದ ಆಧಾರದ ಮೇಲೆ ಪಿಎಂ ಕೇರ್ಸ್ ಟ್ರಸ್ಟ್‌ನಲ್ಲಿ ಕಾರ್ಯ ನಿರ್ವಹಿಸಲು ಅವಕಾಶವಿದೆ ಎಂದವರು ತಿಳಿಸಿದ್ದಾರೆ.

ಸಂಯಕ್ ಗಂಗ್ವಾಲ್ ಎಂಬುವವರು ಅರ್ಜಿಯೊಂದನ್ನು ದಾಖಲಿಸಿ, ಪಿಎಂ ಕೇರ್ಸ್ ನಿಧಿ ಸರ್ಕಾರಿ ಸ್ವರೂಪದ್ದು ಎಂದು ವಾದಿಸಿದ್ದರು. ಒಂದು ವೇಳೆ ಈ ನಿಧಿ ಸರ್ಕಾರದ್ದಲ್ಲ ಎನ್ನುವುದಾದರೆ ಸರ್ಕಾರ, ಪ್ರಧಾನ ಮಂತ್ರಿಯ ಭಾವಚಿತ್ರ, ಸರ್ಕಾರದ ಚಿಹ್ನೆ ಮತ್ತಿತರೆ ಚಿಹ್ನೆಗಳನ್ನು ಬಳಸುವುದನ್ನು ನಿಲ್ಲಿಸಬೇಕು ಎಂದು ಕೋರಿದ್ದರು.

ಈ ಟ್ರಸ್ಟ್‌ನಲ್ಲಿ ಪ್ರಧಾನ ಮಂತ್ರಿ, ರಕ್ಷಣಾ ಸಚಿವ, ಗೃಹ ಸಚಿವ ಹಾಗೂ ಹಣಕಾಸು ಸಚಿವರಿದ್ದಾರೆ. ಕೇಂದ್ರ ಸರ್ಕಾರವೇ ಈ ನಿಧಿಯನ್ನು ನಿರ್ವಹಿಸುತ್ತಿದೆ ಎಂದು ಅರ್ಜಿದಾರರು ಹೇಳಿದ್ದರು.

## ಹಿರಿಯ ನಾಗರಿಕರಿಗೆ ಕ್ರೀಡಾಕೂಟ ಸ್ಪರ್ಧೆ

ದಾವಣಗೆರೆ, ಸೆ. 23- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ಇದೇ ದಿನಾಂಕ 26 ರಂದು ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿರುವ ಬಾಪೂಜಿ ಪ್ರೌಢಶಾಲೆ ಆವರಣದಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಸ್ಪರ್ಧೆಗಳನ್ನು ಮಹಿಳೆಯರು ಮತ್ತು ಪುರುಷರಿಗೆ (60 ರಿಂದ 69, 70 ರಿಂದ 79 ಹಾಗೂ 80 ವರ್ಷ ಮೇಲ್ಪಟ್ಟವರು) ಕ್ರೀಡೆ - ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.


ಕ್ರೀಡಾ ಸ್ಪರ್ಧೆಗಳ ವಿಭಾಗದಲ್ಲಿ ನಡಿಗೆ, ರಿಂಗನ್ನು ಬಕೆಟ್‌ನಲ್ಲಿ ಎಸೆಯುವುದು, ಕೇರಂ ಸ್ಪರ್ಧೆ ಇದೆ. ಸಾಂಸ್ಕೃತಿಕ ಸ್ಪರ್ಧೆ ವಿಭಾಗದಲ್ಲಿ ಏಕಪಾತ್ರ ಅಭಿನಯ, ಗಾಯನ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ ಇವೆ. ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವವರು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ. ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸುವವರು ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಆಸಕ್ತ ಹಿರಿಯ ನಾಗರಿಕರು ನಾಡಿದ್ದು ದಿನಾಂಕ 25 ರೊಳಗೆ ವಿಕಲಚೇತನರ ಸಹಾಯವಾಣಿ ಕೇಂದ್ರ ದೂರವಾಣಿ: 08192-263939, ಗುರುಮೂರ್ತಿ (9844143827, ಮಾರುತಿ ಬಿ.ಎಸ್ -8147838023, ಹಿರಿಯ ನಾಗರಿಕರ ಸಹಾಯವಾಣಿ, ಮೊ:7337635691 (ನವೀನ್) 7483968224 (ಲಕ್ಷ್ಮಿ) ಇವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

## ಹರಿಹರದಲ್ಲಿ ಇಂದು-ನಾಳೆ ನೀರು ಪೂರೈಕೆ ವ್ಯತ್ಯಯ

ನಗರಸಭೆ ವ್ಯಾಪ್ತಿಯಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಿಂದ ಕೆಯುಐಡಿಎಫ್‌ಸಿ - ಕೆಐಯುಡ ಬ್ಲ್ಯೂಎಂಐಪಿ-ಪಿ.ಐ.ಯು ಜಲಸಿರಿ ಯೋಜನೆಯಡಿ ಕೈಗೊಂಡಿರುವ ನಿರಂತರ ಕುಡಿಯುವ ನೀರು ಸರಬರಾಜು ಕಾಮಗಾರಿಯ (24x7), ನೀರು ಶುದ್ಧೀಕರಣ ಘಟಕದ ಹತ್ತಿರ ಫ್ಲೋ ಕಂಟ್ರೋಲ್ ವಾಲ್ವ್ ಅಥವಾ ಮೀಟರ್ ಅಳವಡಿಸಬೇಕಾಗಿರು ವುದರಿಂದ ಇಂದು ಮತ್ತು ನಾಳೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಗರಸಭೆಯ ಪೌರಾಯುಕ್ತರಾದ ಶ್ರೀಮತಿ ಎಸ್.ಲಕ್ಷ್ಮಿ ತಿಳಿಸಿದ್ದಾರೆ.

# ಹರಿಹರೇಶ್ವರ ದೇವಸ್ಥಾನ ಅಭಿವೃದ್ಧಿಗಾಗಿ ಸದನದ ಗಮನ ಸೆಳೆದ ಶಾಸಕ ರಾಮಪ್ಪ



ಬೆಂಗಳೂರು, ಸೆ.23- ಹರಿಹರದ ಶ್ರೀ ಹರಿಹರೇಶ್ವರ ದೇವಸ್ಥಾನವನ್ನು ಅಭಿವೃದ್ಧಿಗೊಳಿಸಿ, ಪ್ರವಾಸಿ ತಾಣವನ್ನಾಗಿ ಮಾಡುವಂತೆ ಶಾಸಕ ಎಸ್.ರಾಮಪ್ಪ ಅವರು ಗುರುವಾರ ವಿಧಾನಸಭೆ ಅಧಿವೇಶನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಕೇಳಿ ಸದನದ ಗಮನ ಸೆಳೆದರು.

ಹರಿಹರೇಶ್ವರ ದೇವಸ್ಥಾನದ ಹತ್ತಿರ ಉದ್ಯಾನವನ ನಿರ್ಮಿಸಿ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಮತ್ತು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು 5 ಕೋಟಿ ರೂ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಹಾಗೂ 2020-21 ಮತ್ತು 2021-22ನೇ ಸಾಲಿನ ಆಯವ್ಯಯದಲ್ಲಿ ಪ್ರವಾಸೋದ್ಯಮ ಇಲಾಖೆಗೆ ನಿಗದಿಪಡಿಸಿದ ಅನುದಾನ ವೆಷ್ಟು? ಎಂಬ ಪ್ರಶ್ನೆಯನ್ನು ಶಾಸಕ ರಾಮಪ್ಪ ಕೇಳಿದರು.

ಇದಕ್ಕೆ ಉತ್ತರಿಸಿದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು, ಶಾಸಕ ರಾಮಪ್ಪ ಅವರು ಹರಿಹರೇಶ್ವರ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ವಿಶಾಲವಾದ ಜಾಗದಲ್ಲಿ ಭಕ್ತರು ಹಾಗೂ ಪ್ರವಾಸಿಗರ ಹಿತದೃಷ್ಟಿಯಿಂದ ವಾಕಿಂಗ್ ಪಾತ್, ಮಕ್ಕಳ ಆಟಿಕೆ, ವೃದ್ಧರ ವಿಶ್ರಾಂತಿ ಮಂಟಪ ಸೇರಿದಂತೆ ಇತ್ಯಾದಿ ಅನುದಾನ ನೀಡುವಂತೆ ಕೋರಿದ್ದಾರೆ.

2021-22ನೇ ಸಾಲಿನ ಆಯವ್ಯಯದಲ್ಲಿ 72 ಕೋಟಿ ಅನುದಾನವನ್ನು ಮಾತ್ರ ಒದಗಿಸಲಾಗಿದ್ದು, ಈ ಸಾಲಿನಲ್ಲಿ ಒಟ್ಟು 1114 ಮುಂದುವರೆದ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳಿವೆ. ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು 220.14 ಕೋಟಿ ರೂ ಅವಶ್ಯಕವಿದ್ದು, ಪ್ರಸಕ್ತ ಸಾಲಿನಲ್ಲಿ 72 ಕೋಟಿ ರೂ. ಮಾತ್ರ ಒದಗಿಸಲಾಗಿದೆ. ಇನ್ನೂ 148.14 ಕೋಟಿ ರೂ. ಅನುದಾನದ ಕೊರತೆಯಿರುವುದರಿಂದ ಪ್ರಸ್ತುತ ಸಾಲಿನಲ್ಲಿ ಶಾಸಕ ರಾಮಪ್ಪ ಅವರ ಪ್ರಸ್ತಾವನೆಯನ್ನು ಪರಿಗಣಿಸಲು ಕಷ್ಟ ಸಾಧ್ಯವಾಗಿರುತ್ತದೆ ಎಂದು ಸಚಿವ ಆನಂದ್ ಸಿಂಗ್ ಉತ್ತರದಲ್ಲಿ ತಿಳಿಸಿದ್ದಾರೆ.

ಇದಕ್ಕೆ ಸಮಾಧಾನಗೊಳ್ಳದ ಶಾಸಕ ರಾಮಪ್ಪ ಅವರು ವಿಶೇಷ ಅನುದಾನ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.




ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ 20 ನೇ ಜಗದ್ಗುರುಗಳಾಗಿ ಸಮಾಜದ ಭಕ್ತರ ಹೃದಯ ಸಿಂಹಾಸನವನ್ನೇರಿ, ಭಕ್ತರ ಏಳಿಗೆಯನ್ನೇ ತಮ್ಮ ಮುಖ್ಯ ಗುರಿಯನ್ನಾಗಿಸಿಕೊಂಡು, ನೂರಾರು ಶಾಲಾ-ಕಾಲೇಜುಗಳನ್ನು ತೆರೆದು, ಜಾತಿ-ಮತಗಳ ಭೇದ ತೋರದೆ ಭಕ್ತರಿಗೆ ಅನ್ನ ದಾಸೋಹದ ಜೊತೆ ವಿದ್ಯಾ ದಾಸೋಹ ನೀಡಿ, ಲಕ್ಷಾಂತರ ಭಕ್ತರು ಇಂದು ವಿವಿಧ ಕ್ಷೇತ್ರಗಳಲ್ಲಿ ಪಾರಂಗತರಾಗಿ ವಿವಿಧ ದೇಶಗಳಲ್ಲಿ ಪ್ರತಿಷ್ಠಿತರಾಗಿರುವಂತೆ ಸ್ಫೂರ್ತಿ ನೀಡಿದ್ದ ದಿಟ್ಟ, ಧೀರ ಹಾಗೂ ಧೀಮಂತ ಗುರುವಿನ 29 ನೇ ಪುಣ್ಯಸ್ಮರಣೆಯ ಕಾರ್ಯಕ್ರಮಕ್ಕೆ ಭಕ್ತಿಪೂರ್ವಕವಾಗಿ ಶುಭ ಕೋರುವ...



ದಿ. ಚನ್ನಬಸಮ್ಮ ಮತ್ತು ದಿ. ಐಗೂರು ಸಿ. ದೊಡ್ಡಬಸಪ್ಪನವರ ಮಕ್ಕಳು ಐಗೂರು ಸಿ. ಚಂದ್ರಶೇಖರ್, ಉಪಾಧ್ಯಕ್ಷರು, ಶಿವ ಸಹಕಾರಿ ಬ್ಯಾಂಕ್ ನಿ., ದಾವಣಗೆರೆ.



ಇಂಡಿಯನ್ ಗ್ಯಾಸ್ ಲಕ್ಕಿ ಕೂಪನ್ ಡ್ರಾ

ದಿನಾಂಕ : 25.09.2021ರ ಶನಿವಾರ
ಸಮಯ : ಬೆಳಿಗ್ಗೆ 10 ಗಂಟೆಗೆ
ಸ್ಥಳ : ಕರ್ನಾಟಕ ಸಾಹಿತ್ಯ ಪರಿಷತ್ ಭವನ, ತುಮಕೂರು.

(ದಾವಣಗೆರೆ ಜಿಲ್ಲಾ LPG ವಿತರಕರ ಅಸೋಸಿಯೇಷನ್ ಪರವಾಗಿ)
ಎಲ್. ದರ್ಶನ್, ಮಾಲೀಕರು, ಶಕ್ತಿ ಗ್ಯಾಸ್ ಏಜೆನ್ಸಿ, ದಾವಣಗೆರೆ.



ಬ್ರಿಟೀಷ್ ಕಾಟನ್ಸ್
ಅಮರಾವತಿ ಹಾಲಪ್ಪನ ಅಂಗಡಿ ಎದುರು, ಚೌಕೀಪೇಟೆ, ದಾವಣಗೆರೆ

ದಸರಾ ಹಬ್ಬದ ಪ್ರಯುಕ್ತ ಮೊಟ್ಟ ಮೊದಲ ಬಾರಿಗೆ ದಾವಣಗೆರೆಯ ನಮ್ಮ ಎಲ್ಲಾ ಕೆ.ಜಿ.ಲೆಕ್ಕದ ಬಟ್ಟೆ ಅಂಗಡಿಗಳಲ್ಲಿ ಭಾರೀ ಕಡಿಮೆ ದರದಲ್ಲಿ

ತೂಕದ ಲೆಕ್ಕದಲ್ಲಿ ಬಟ್ಟೆಗಳ ಮಾರಾಟ

1 ಕೆ.ಜಿ ಬಟ್ಟೆ – ~~(799)~~ 599
2 ಕೆ.ಜಿ ಬಟ್ಟೆ – ~~(1600)~~ 999

ನಮ್ಮಲ್ಲಿ ಮಹಿಳೆಯರ, ಪುರುಷರ, ಮಕ್ಕಳ ಎಲ್ಲಾ ತರಹದ ಕಾಟನ್ ಬಟ್ಟೆಗಳು ದೊರೆಯುತ್ತವೆ


ಮಲಬಾರ್ ಕಾಟನ್ಸ್, ಒಕ್ಕಲಿಗರಪೇಟೆ, ದಾವಣಗೆರೆ
ಕೆ.ಜಿ. ಬಜಾರ್, ಬಿ.ಎಸ್.ಚನ್ನಬಸಪ್ಪ ಬಟ್ಟೆ ಅಂಗಡಿ ಎದುರು, ಕಾಳಿಕಾದೇವಿ ರಸ್ತೆ, ದಾವಣಗೆರೆ

ಸಂಪರ್ಕಿಸಿ: 9742090612, 733-8602813



॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿಗಳಾದ ಕೆಂಚನಹಳ್ಳಿ (ಕಲ್ಯಾಣಪ್ಪರ) ಶ್ರೀ ಷಡಾಕ್ಷರಪ್ಪ ಹಾಗೂ ಸಹೋದರರು ಮಾಡುವ ವಿಜ್ಞಾಪನೆಗಳು. ದಿನಾಂಕ : 16.09.2021ನೇ ಗುರುವಾರ ಸಾಯಂಕಾಲ 6.58ಕ್ಕೆ ನನ್ನ ತಮ್ಮನಾದ

ಶ್ರೀ ಕೆ. ರೇವಣಪ್ಪನವರು

(ಗೌರಿಶಂಕರ್ ಟ್ರ್ಯಾಕ್ಟರ್ ಗ್ಯಾರೇಜ್ ಮಾಲೀಕರು) ಶಿವಾಧೀನರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ "ಕೈಲಾಸ ಶಿವಗಣಾರಾಧನೆ"ಯನ್ನು ದಿನಾಂಕ : 24.09.2021ನೇ ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ, ಕಕ್ಕರಗೊಳ್ಳದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಷಡಾಕ್ಷರಪ್ಪ ಹಾಗೂ ಸಹೋದರರು, ಶ್ರೀಮತಿ ವಿಮಲ ರೇವಣಪ್ಪ, ಮಕ್ಕಳಾದ ಶ್ರೀಮತಿ ಸುಮ ಶ್ರೀ ಸುನೀಲ್ ಅಳಿಯಂದಿರು ಹಾಗೂ ಕೆಂಚನಹಳ್ಳಿ ಸಹೋದರರು, ಕಕ್ಕರಗೊಳ್ಳ ಹಾಗೂ ಬಂಧು-ಮಿತ್ರರು.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ॥ ಜಿಲ್ಲೆ, ಅಗಸನಕಟ್ಟೆ ಗ್ರಾಮದ ವಾಸಿ ಚಿಕ್ಕನಹಳ್ಳಿ ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು, ಮಾಡುವ ವಿಜ್ಞಾಪನೆಗಳು. ದಿನಾಂಕ : 17.09.2021ನೇ ಶುಕ್ರವಾರ ಬೆಳಿಗ್ಗೆ 11.50ಕ್ಕೆ ನನ್ನ ಪೂಜ್ಯ ಪತಿಯವರಾದ

ಚಿಕ್ಕನಹಳ್ಳಿ ಶರಣ ಮಲ್ಲಪ್ಪನವರು

ಶಿವಾಧೀನರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ "ಕೈಲಾಸ ಶಿವಗಣಾರಾಧನೆ"ಯನ್ನು ದಿನಾಂಕ : 25.09.2021ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ, ಅಗಸನಕಟ್ಟೆ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಸಿ.ಎಂ. ಮರುಳಸಿದ್ದಪ್ಪ ಮತ್ತು ಸಹೋದರರು, ಎ.ಸಿ.ಎಂ. ಅಂಡ್ ಸನ್ಸ್, ಎಪಿಎಂಸಿ ಯಾರ್ಡ್, ಬಿ ಬ್ಲಾಕ್, ದಾವಣಗೆರೆ., ಫೋ. : 94488 33420, 9481287809
ಚಿಕ್ಕನಹಳ್ಳಿ ವಂಶಸ್ಥರು, ಅಗಸನಕಟ್ಟೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte